ನವೋದಯ ಪ್ರಚಾರ ಪುಸ್ತಕಮಾಲೆ – ೨೦

ಪಂಜೆ ಮಂಗೇಶರಾವ್

ಶೇಖರ ಇಡ್ಯ

ಮಹಾತ್ಮಾ ಗಾಂಧಿ
ಮೆಮೋರಿಯಲ್ ಕಾಲೇಜು
ಉಡುಪಿ – 2

ನವೋದಯ ಪ್ರಚಾರ ಪುಸ್ತಕಮಾಲೆ— ೨೦

ಪಂಜೆ ಮಂಗೇಶ ರಾವ್

ಶೇಖರ ಇಡ್ಯ

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು
ಉಡುಪಿ–೨.

ಮೊದಲನೆಯ ಮುದ್ರಣ ೧೯೭೦

ಬೆಲೆ: ೫೦ ಪೈಸೆ

ಮುದ್ರಕರು: ಕೆ. ಗಣೇಶ್ ಪೈ
ಶ್ರೀ ಗಣೇಶ್ ಪ್ರಿಂಟರ್ಸ್, ಅಳಕೆ, ಮಂಗಳೂರು-೩.

ನವೋದಯ ಪ್ರಚಾರ-ಅಂದು ಇಂದು

ನಮ್ಮ ನವೋದಯ ಪ್ರಚಾರ ಪುಸ್ತಕ ಮಾಲೆ ಕಾಲೇಜಿನ ವಾರ್ಷಿಕ ಸಾಹಿತ್ಯೋತ್ಸವ ಸಂದರ್ಭದಲ್ಲಿ ಮಾಡಿದ ಭಾಷಣ ಗಳನ್ನು ಮಾತ್ರವೇ ಅಲ್ಲದೆ ಕನ್ನಡ ಸಾಹಿತಿ-ಕಲಾವಿದರ ಕುರಿತು ಲಿಖಿತ ಪ್ರಬಂಧಗಳನ್ನೂ ಪ್ರಕಟಿಸಲು ತೊಡಗಿ ಹದಿನೈದು ವರ್ಷಗಳಾದುವು. ‹ಲಾಭ ಬೇಡ, ನಷ್ಟವಿಲ್ಲ› ಎಂಬ ಆರ್ಥಿಕ ತಳಹದಿಯಲ್ಲಿ ಕಾಲೇಜು ಕೈಗೊಂಡ ಈ ಪ್ರಕಟನ ಸಾಹಸಕ್ಕೆ ಕನ್ನಡಿಗರು ಸಾಕಷ್ಟು ಪ್ರೋತ್ಸಾಹ ನೀಡಿದ್ದಾರೆ.

ಪ್ರಕಟನೆಯ ಬಗ್ಗೆ ನಾವು ಯಾವ ನಿಯಮಿತತೆಯನ್ನೂ ಇಟ್ಟುಕೊಂಡಿಲ್ಲವಾದರೂ ಇದುವರೆಗೆ ಸುಮಾರು ಹದಿನೈದು ಪುಸ್ತಕಗಳು ಅಚ್ಚಾಗಿವೆ. ಅದರಲ್ಲಿ ಎಷ್ಟೋ ತೀರಿವೆ. ಮುಂಬ ರುವ ಜಿಲ್ಲಾ ಸಾಹಿತ್ಯ ಸಮ್ಮೇಳನದ ನೆಪದಲ್ಲಿ ಮತ್ತೊಮ್ಮೆ ಈ ಜಿಲ್ಲೆ ಕನ್ನಡ ನಾಡಿನ ಸೇವೆಗೆ ಅಣಿಗೊಳಿಸಿದ ಮಹನೀಯರ ಪರಿಚಯವನ್ನು ಪ್ರಾಂಕ್ತವಾಗಿ ಪ್ರಕಟಿಸಬೇಕೆಂಬ ನಮ್ಮ ಆಶಯ ದೊಡ್ಡದೆ. ಹಲವು ಮಂದಿ ಲೇಖಕರು ಇದರಲ್ಲಿ ಸಹ ಕರಿಸಿದ್ದಾರೆ. ಇದುವರೆಗೆ ಪ್ರಕಟಿತವಾದ (ಮರುಪ್ರಕಟಿತವಾದ) ಗೋವಿಂದ ಪೈ, ಕಡೆಂಗೋಡ್ಲು, ಸೇಡಿಯಾಪು, ಕಾರಂತ ಅವರ ಜನತೆಗೆ ಮುಳಿಯ ತಿಮ್ಮಪ್ಪಯ್ಯ, ಪಂಜೆ ಮಂಗೇಶ ರಾವ್, ಹುರುಳಿ ಭೀಮರಾವ್, ಉಗ್ರಾಣ ಮಂಗೇಶ ರಾವ್, ಎಸ್

ವೆಂಕಟರಾಜ, ಕಯ್ಯಾರ ಕಿಞ್ಞಣ್ಣ ರೈ, ಅವರನ್ನೂ ಪೋಣಿಸಿದ ಬಳಿಕ ಜಿಲ್ಲೆಯ ಸಾಹಿತ್ಯ ವ್ಯವಸಾಯದ ಒಂದು ಸಮಗ್ರ ಚಿತ್ರ ಮೂಡುವುದೆಂದು ನಾವು ಆಶಿಸಿದ್ದೇವೆ.

ಪುಸ್ತಕ ಪ್ರಕಟನೆಯ ಲೇಖಕರು ಮಾಲೆಯ ಇತಿಮಿತಿ ಮತ್ತು ನಿಯಮಿತ ಅವಧಿಯೊಳಗೇನೆ ತಮ್ಮ ಕೃತಿಯನ್ನು ರಚಿಸಿ ಉಪಕರಿಸಿದ್ದಾರೆ. ಅವರಿಗೂ, ಸುಂದರವಾಗಿ ಮುದ್ರಿಸಿಕೊಟ್ಟ ಶ್ರೀ ಗಣೇಶ ಪ್ರಿಂಟರ್ಸ್, ಅಳಕೆ, ಮಂಗಳೂರು-೩. ಅವರಿಗೂ ನಮ್ಮ ಕೃತಜ್ಞತೆ,

ಅಕ್ಟೋಬರ-21, 1971 **ಕು. ಶಿ. ಹರಿದಾಸ ಭಟ್ಟ**

ಪ್ರಧಾನ ಸಂಪಾದಕ.

ಮೊದಲ ಮಾತು

ಸಾಂಸ್ಕೃತಿಕವಾಗಿ ನಾಡನ್ನು ಕಟ್ಟಿದ ಹಿರಿಯ ಚೇತನಗಳ ಲ್ಲೊಂದಾದ ಪಂಜೆಮಂಗೇಶರಾಯರ ಜನ್ಮಶತಾಬ್ದಿಯ ಶುಭ ದಿನವು ಸಮೀಪಿಸುತ್ತಿರುವಲ್ಲಿ ಈ ಹೊತ್ತಿಗೆಯನ್ನು ಕನ್ನಡಿಗರ ಮುಂದೆ ಇರಿಸಲು ಹರ್ಷವಾಗುತ್ತಿದೆ. ನಮ್ಮ ನುಡಿ ಇಂಪನ್ನು, ಸತ್ವವನ್ನು ಪಂಜೆಯವರಂತೆ ಮೆಚ್ಚಿದವರು ವಿರಳ; ಅವರಂತೆ ನುಡಿಯ ಸೊಗಸನ್ನು ಹೆಚ್ಚಿಸಲು ತಮ್ಮನ್ನೇ ತೇದವರು ವಿರಳ. ಹೊಸಗನ್ನಡದ ಆದ್ಯರಲ್ಲೊಬ್ಬರಾದ ಇವರನ್ನು ನಾವು ನೆನಸಿ ಕೃತಜ್ಞರಾಗುವುದರಲ್ಲಿ ಧನ್ಯತೆಯಿದೆ.

ಕೆಲವು ತಿಂಗಳ ಹಿಂದೆ ಪಂಜೆಯವರ ಕಾವ್ಯ ಪ್ರತಿಭೆ ಮತ್ತು ಹೊಸಸಾಹಿತ್ಯಪ್ರಕಾರಗಳ ಆರಂಭಿಕಕೃಷಿಗಳ ಬೆಲೆಯನ್ನ ರಿಯದವರೊಬ್ಬರು 'ಅವರು ಜಿಲ್ಲಾ ಮಟ್ಟದ ಸಾಹಿತಿ, ಕವಿ' ಯೆಂದು ಹೇಳಿದ ವಾರ್ತೆ ತಲಪಿದಾಗ ಈ ಹಿರಿಯ ಕವಿಚೇತನ ಕ್ಕಾಗುವ ಅಪಚಾರಕ್ಕಾಗಿ ನನ್ನ ಮನಸ್ಸು ನೊಂದಿತು. ಅವರ ಸಾಧನೆ, ಸಿದ್ಧಿಗಳನ್ನು ಪರಿಚಯಿಸಬೇಕೆಂಬ ಹಂಬಲದಿಂದ ಗೆಳೆ ಯರಾದ ಶ್ರೀ ಸೀ. ಹೊಸಬೆಟ್ಟು, ಅವರೊಂದಿಗೆ ವಿಷಯ ಸಂಗ್ರಹಕ್ಕೆ ಆರಂಭಿಸಿದ್ದೆನು. ಇದೀಗ ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರ ಆದೇಶ, ಕೃಪೆಯಿಂದಾಗಿ ಈ ಪುಟ್ಟ ಪರಿಚ ಯವು ಸಿದ್ಧವಾಗಿದೆ. ಪುಸ್ತಿಕೆಯ ಗಾತ್ರದ ಪರಿಮಿತಿಯಲ್ಲಿ ಪಂಜೆಯವರ ವ್ಯಕ್ತಿತ್ವವನ್ನೇ ಪ್ರಧಾನವನ್ನಾಗಿರಿಸಿದ ಸ್ಥೂಲ ಪರಿಚಯವಿದು.

ಸಜ್ಜನಿಕೆ, ಸುಸಂಸ್ಕೃತಿ, ಸಾಹಿತ್ಯ, ವಿದ್ಯಾದಾನ ಜ್ಞಾನಗಳ ಸೊಗಸಾದ ಪಾಕವಾಗಿದ್ದ ಪಂಜೆಯವರ ಸಾರ್ಥಕಜೀವನದ ಮುಖ್ಯಾಂಶಗಳನ್ನು ಶ್ರೀ ಶಿವರಾಮ ಕಾರಂತರು 'ಪಂಜೆಯವರ ನೆನಪಿಗಾಗಿ' ಸಂಪುಟದಲ್ಲಿ ಪೋಣಿಸಿದ್ದಾರೆ. ಈ ಕಿರುಪರಿಚಯಕ್ಕೆ ಅದೇ ಮುಖ್ಯ ಆತರ. ಆದಕ್ಕಾಗಿ ಆ ಸಂಪುಟದಲ್ಲಿರುವ ಲೇಖಕರಿಗೆಲ್ಲರಿಗೂ ನಾನು ಋಣಿಯಾಗಿದ್ದೇನೆ ಪಂಜೆಯವರನ್ನು ಕಾಣುವ ಭಾಗ್ಯವಿರದ ನಾನು ನನಗೆ ಸಿಕ್ಕ ವಿವರಗಳಿಂದಲೇ ಅವರ ಚಿತ್ರ ಒಡಮೂಡುವಂತೆ ಮಾಡುವಲ್ಲಿ ಪಂಜೆಯವರೊಂದಿಗೆ ನಿಕಟರಾಗಿದ್ದ ಹಿರಿಯರಾದ ಸರ್ವ ಶ್ರೀ ಬಿ. ದಾಮೋದರ ಬಾಳಿಗ, ಬಿ. ಶಂಕರ ಭಟ್, ಶಿವರಾಮ ಕಾರಂತ, ನರ್ಕಳ ಮಾರಪ ಶೆಟ್ಟಿ ಇವರೆಲ್ಲ ಕೆಲವು ವಿವರಗಳನ್ನು ಒದಗಿಸಿ ಉಪಕರಿಸಿದ್ದಾರೆ. ಪೂಜ್ಯ ಗುರುಗಳಾದ ಶ್ರೀ ಎಂ ವಾಸುದೇವರಾವ್, ವಿದ್ವಾನ್ ಶ್ರೀ ವೆಂಕಟರಾಯಾಚಾರ್ಯ, ಸಹೋದ್ಯೋಗಿಗಳಾದ ಶ್ರೀ ಸೀ. ಹೊಸಬೆಟ್ಟು, ಶ್ರೀ ಎ. ಶಂಕರನಾರಾಯಣ ಭಟ್ ಮತ್ತು ಕನ್ನಡ ಬರಹಗಾರದ ಬಳಗದ ಸಂಗ್ರಾಹಕರಾದ ಶ್ರೀ ಟಿ. ಚಂದ್ರರಾಜ ಶೆಟ್ಟಿ ಸಿದ್ಧಕಟ್ಟೆಯವರು ನನ್ನ ಕಾರ್ಯದಲ್ಲಿ ನೆರವನ್ನಿತ್ತವರು. ಅಂತೆಯೇ ನನ್ನ ಪ್ರಿನ್ಸಿಪಾಲರಾದ ಜಿ. ಕೆ. ರಾವ್ ಮತ್ತು ಪ್ರಿನ್ಸಿಪಾಲ ಕು. ಶಿ. ಹರಿದಾಸ ಭಟ್ಟರು ಪ್ರೋತ್ಸಾಹಿಸುತ್ತಾ ಬೆಂಬಲಿಸುತ್ತಿರುವವರು. ಈ ಎಲ್ಲ ಹಿತೈಷಿಗಳಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ಸಂತೋಷದ ಕರ್ತವ್ಯವಾಗಿದೆ.

12-10-71 ಶೇಖರ ಇಡ್ಯ

ಗೋವಿಂದದಾಸ ಕಾಲೇಜ್


ಸುರತ್ಕಲ್.

"ಅವರು ಸಾಮಾನ್ಯ ಕವಿಗಳಾಗಿರಲಿಲ್ಲ; ಕನ್ನಡ ಕವನ ರಾಜ್ಯದಲ್ಲಿ ಸರಳತೆಗೆ ಒಂದು ಹೊಸ ಹಾದಿ ಹಾಕಿಕೊಟ್ಟವರು. ಅವರು ತಮ್ಮ ಬರವಣಿಗೆಗಳಿಂದಲೂ, ಸಾಹಿತ್ಯ ವಿಮರ್ಶೆಯಿಂದಲೂ, ಸಾಹಿತ್ಯವನ್ನೇ ಜನಜೀವನಕ್ಕೆ ಸಮೀಪವಾಗಿ ತರಯತ್ನಿಸಿದ ಸಾಹಿಸಿಗಳು. ಹಳೆದನ್ನು ಬಿಟ್ಟು, ಹೊಸಹಾದಿ ತುಳಿದವರು; ಸಂಪ್ರದಾಯ ನಿರ್ಬಂಧಗಳನ್ನು ಹರಿದು ಬಂದು –ಸಾಹಿತ್ಯ ಇಂದಿನ ಬದುಕಿಗೆ, ಜೀವನಕ್ಕೆ ತಕ್ಕ ವಾಹಕವಾಗುವಂತೆ ಶ್ರಮಿಸಿದವರು."

ಎಚ್. ಸುಂದರರಾಯರು

(ಪಂಜೆಯವರ ನೆನಪಿಗಾಗಿ ಪುಟ ೩೦)

ಪಂಜೆಯುವರು



ಪಂಜೆ ಮಂಗೇಶ ರಾವ್

ಪಂಜೆ ಮಂಗೇಶ ರಾವ್

ಕಾಲಪುರುಷನ ಬಿರುಸಾದ ಪೆಟ್ಟುಗಳಿಂದ ಛಿದ್ರಶರೀರವಾಗಿ ಗುಟುಕುಸಿರನ್ನು ಹಿಡಿದುಕೊಂಡು ಬದುಕಿಕೊಂಡಿದ್ದ ಕನ್ನಾಡಿನಲ್ಲಿ ಈ ಶತಮಾನದ ಆರಂಭದಲ್ಲಿ ಹೊರಹೊಮ್ಮಿದ ಸಾಹಿತ್ಯ ಸಂಸ್ಕೃತಿಗಳ ನವೋದಯವು ಒಂದು ಪವಾಡದಂತಿದೆ. ಇದಕ್ಕೆ ಚಾರಿತ್ರಿಕ ಶಕ್ತಿಗಳು ಕಾರಣವಾಗಿರುವಷ್ಟೇ ಹಲವು ಹಿರಿಯ ವ್ಯಕ್ತಿಗಳೂ ಕಾರಣರಿದ್ದಾರೆ. ಅತ್ಯಂತ ನಿರುತ್ಸಾಹದ ಅಂದಿನ ಸನ್ನಿವೇಶದಲ್ಲಿ ನಾಡಿನ ಗೌರವವನ್ನು ರಕ್ಷಿಸಿ, ಎತ್ತಿ ಹಿಡಿದ ಮಹನೀಯರಲ್ಲಿ ಡೆಪ್ಯೂಟಿ ಚೆನ್ನಬಸಪ್ಪ, ರೊದ್ದ, ವಿಶ್ವೇಶ್ವರಯ್ಯ, ಮುದವೀಡು ಮತ್ತು ಆಲೂರರಂತಹರು ಅಗ್ರಗಣ್ಯರು. ಇವರಲ್ಲಿ ಹಲವರು ಈ ಕಾಯಕವನ್ನು 19ನೆಯ ಶತಮಾನದ ಕೊನೆಯಲ್ಲೇ ಆರಂಭಿಸಿದ್ದರು. ಅಂತೆಯೇ ನಮ್ಮ ಸಾಹಿತ್ಯ, ಕಲೆ, ಸಂಸ್ಕೃತಿಗಳ ಸೊಗಸು, ವೈಭವಗಳ ದರ್ಶನವನ್ನು ಮಾಡಿಸಿ, ನಾಡಿನ ಮೇಲೆ ಅಭಿಮಾನವು ಕುದುರುವಂತೆ ದುಡಿದವರೂ ಹಲರಿದ್ದಾರೆ. ಸಾಹಿತ್ಯಸೃಷ್ಟಿ, ಪ್ರತಿಕಾ ವ್ಯವಸಾಯ ಅಧ್ಯಾಪನ, ಪ್ರಚಾರ ಭಾಷಣ ಮುಂತಾದ ಸಾಧನಗಳ ಮೂಲಕ ಇವರು ಆಧುನಿಕ ಕಾಲದಲ್ಲಿ ನಾಡನ್ನು ಕಟ್ಟಿದವರು. ಈ ನಾಡಶಿಲ್ಪಿಗಳಲ್ಲಿ ಬಿ. ಎಂ. ಶ್ರೀ, ಬೆಳ್ಳಾವೆ ಮುಂತಾದವರನ್ನು ನಾವಿಂದು ಕೃತಜ್ಞತೆಯಿಂದ ನೆನಸುತ್ತಿದ್ದೇವೆ. ದಿವಂಗತ ಪಂಜೆ ಮಂಗೇಶರಾಯರಿಗೆ ನಾಡಶಿಲ್ಪಿಗಳ ಬಂತಿ

ಯಲ್ಲಿ ತನ್ನ ಯೋಗ್ಯತೆ ಮತ್ತು ಸೇವೆಗಳ ಬಲದಿಂದ ಸ್ಥಾನವು ದೊರಕಿತು.

ಕರಾವಳಿ ಕರ್ನಾಟಕದಲ್ಲಿ ಆರಂಭವಾಗಿದ್ದ ಪಂಜೆಯವರ ಕಾರ್ಯಕ್ಷೇತ್ರವು ಕಾಲಕ್ರಮದಲ್ಲಿ ಇಡೀ ನಾಡನ್ನೇ ಆವರಿಸಿದ್ದು ನಮ್ಮ ಸುದೈವ. ಕನ್ನಡತಾಯಿಯ ಪರಮಭಕ್ತರಾಗಿದ್ದ ಇವರ ನುಡಿಯ ಆರಾಧನೆ ಮತ್ತು ಸೇವೆಗಳಿಗೆ ತನ್ನ ಬಾಲ್ಯದ ಆರ್ಥಿಕ ಕಷ್ಟಗಳಾಗಲೀ, ಯೌವನದ ಸರಕಾರಿ ಉದ್ಯೋಗ ವಾಗಲೀ ಅಡ್ಡಿಯಾಗಲಿಲ್ಲ. ಪ್ರತಿಕೂಲಪರಿಸ್ಥಿತಿಗಳಲ್ಲೂ ತಮ್ಮ ಕಾರ್ಯಗಳಲ್ಲಿ ಸಾರ್ಥಕತೆಯನ್ನು ಪಡೆದು, ಸರ್ವರಿಂದ ಆದರಾಭಿ ಮಾನಗಳನ್ನು ಪಡೆದರು. ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಹಲವು ಹೊಸ ಸಾಹಿತ್ಯ ಪ್ರಕಾರಗಳನ್ನಾರಂಭಿಸಿ, ಪ್ರದೇಶದ ಅಧ್ಯಾಪಕರ ಮೇಲೆ ಮಹತ್ವದ ಪ್ರಭಾವವನ್ನು ಬೀರಿ ಅವರಿಗೆ ದಾರಿಬೆಳಕಾದರು. ಕಳೆದ ಹಲವು ದಶಕಗಳಲ್ಲಿ ಈ ಜಿಲ್ಲೆಯ ಶಿಕ್ಷಣದ ಗುಣಮಟ್ಟವು ತಕ್ಕಮಟ್ಟಿಗೆ ಉತ್ತಮವೆಂದೆನಿಸಲು ಪಂಜೆಯಂತಹರು ತರಬೇತಿ ಗೊಳಿಸಿದ ಅಧ್ಯಾಪಕರೂ ಕಾರಣರಿದ್ದಾರೆಂಬುದರಲ್ಲಿ ಸಂದೇಹ ವಿಲ್ಲ.

ಸಾಹಿತ್ಯ ಮತ್ತು ವಿದ್ಯಾಕ್ಷೇತ್ರಗಳಲ್ಲಿ ಮೊನ್ನೆಮೊನ್ನೆಯ ವರೆಗೆ ಶ್ರಮಿಸಿದ ಮಂಗೇಶರಾಯರುಗಳು ಹಲವರು. ಚಿತ್ರಾ ಪುರ ಸಾರಸ್ವತರಲ್ಲಿ ಮಂಗೇಶನೆಂಬ ಹೆಸರು ಹೆಚ್ಚು. ಆಂತಾಗಿ ಮಂಗೇಶರಾಯರೆಂದರೆ ಯಾವ ಮಂಗೇಶರಾಯರೆಂದು ಕೇಳುವ ಅವಶ್ಯಕತೆಯೇಳುತ್ತಿತ್ತು. ಬದಲಾಗಿ ಪಂಜೆ ಯಾ ಉಳ್ಳಾಲ ಯಾ ಉಗ್ರಾಣ ಎಂಬ ಊರ ಹೆಸರನ್ನು ಮಾತ್ರ ಹೇಳಿದರೆ ಉದ್ದೇಶಿಸಿದ ವ್ಯಕ್ತಿಯಾರೆಂದು ಗೊತ್ತಾಗುತ್ತಿತ್ತು. ಉಗ್ರಾಣರು ಉಮರಾರೆಂದೂ ಸಾಹಿತ್ಯ ಲೋಕದಲ್ಲಿ ಪ್ರಸಿದ್ಧರು. ವಿದ್ಯಾ ಇಲಾಖೆಯಲ್ಲಿ ತೋನ್ಸೆ ಮಂಗೇಶರಾಯರೆಂಬವರೂ ಇದ್ದರು.

ಇವರೆಲ್ಲರೂ ಮನೆಮಾತು ಕೊಂಕಣಿಯಾಗಿದ್ದೂ, ಕನ್ನಡಕ್ಕಾಗಿ ದುಡಿದವರು, ಕನ್ನಡ ಸಂಸ್ಕೃತಿಯ ಪ್ರಚಾರ ನಡೆಸಿದವರು; ಈ ಸೀಮೆಯಲ್ಲಿ ಪ್ರಾಚೀನ ಸಾಹಿತ್ಯ, ನಾಟಕ, ಯಕ್ಷಗಾನಗಳ ಮೇಲೆ ಮಮತೆಯನ್ನು ಬೆಳೆಸಿ ಶುದ್ಧವಾದ ಅಭಿರುಚಿಯನ್ನುಂಟು ಮಾಡಿದವರು; ಇಂದಿಗೂ ಮಾದರಿಯಾಗಬಲ್ಲ ಪಠ್ಯಪುಸ್ತಕಗಳನ್ನೂ, ಕವನಸಂಕಲನಗಳನ್ನೂ ಸಿದ್ಧಗೊಳಿಸಿದವರು. ಇಂತಹವರಲ್ಲಿ ಪಂಜೆಯವರ ಸ್ಥಾನವು ಮುಂಚೂಣಿಯಲ್ಲಿದೆ.

ಪಂಜೆ ಮಂಗೇಶರಾಯರ ಮನೆತನವು ಹೆಸರೇ ಸೂಚಿಸುವಂತೆ ಸುಬ್ರಹ್ಮಣ್ಯಕ್ಕೆ ಸಮೀಪವಿರುವ ಪಂಜವೆಂಬ ಹಳ್ಳಿಗೆ ಸೇರಿದ್ದು. ಅವರ ಕೃತಿಗಳಲ್ಲಿ ಸ್ಮರಣೀಯವಾಗಿರುವ 'ಕೋಟಿ ಚೆನ್ನಯ' ಕತೆಯಲ್ಲಿನ ಸನ್ನಿವೇಶಗಳಲ್ಲೊಂದಾದ ಊರೇ ಪಂಜ. ಆದರೆ ಮಂಗೇಶರಾಯರು ಹುಟ್ಟಿದ್ದು ಬೆಳೆದದ್ದು, ಆ ದಿನಗಳಲ್ಲೂ ವಾಣಿಜ್ಯ ವ್ಯವಹಾರಗಳಿಗೆ ಕೇಂದ್ರವಾಗಿದ್ದ ಬಂಟವಾಳದ ಪೇಟೆಯಲ್ಲಿ. ಪಂಜೆಯವರ ಮುತ್ತಜ್ಜನಾದ ದಾಸಪ್ಪಯ್ಯ ತೀರಿಕೊಂಡಾಗ ಎಳೆ ವಯಸ್ಸಿನ ವಿಧವೆಯು ಮಕ್ಕಳುಮರಿಗಳನ್ನು ಕಟ್ಟಿಕೊಂಡು 50 ಮೈಲಿಗಳಷ್ಟು ದೂರವಿದ್ದ ಬಂಟವಾಳಕ್ಕೆ ಬಂದು ನೆಲಸಿದರಂತೆ. ಆ ಕಾಲದಲ್ಲಿ ಆ ಊರು ಚಿತ್ರಾಪುರ ಸಾರಸ್ವತರ ಕೇಂದ್ರವಾಗಿತ್ತು. ಅದೇ ಆಕೆಗೆ ಧೈರ್ಯ ವಿಶ್ವಾಸವನ್ನು ಕೊಟ್ಟಿದ್ದಿರಬೇಕು. ಆಕೆಯ ಮೊಮ್ಮಗನಾದ ರಾಮಪ್ಪನವರೇ ಮಂಗೇಶರಾಯರ ತಂದೆ. ಧಾರೇಶ್ವರ ಕುಟುಂಬದಿಂದ ರಾಮಪ್ಪಯ್ಯನ ಸಹಧರ್ಮಿಣಿಯಾಗಿ ಬಂದ ಶಾಂತಾದುರ್ಗಾ ಯಾ ಸೀತಮ್ಮಳೇ ಹಡೆದಾಕೆ. ಈ ದಂಪತಿಗಳ ಐದು ಮಕ್ಕಳಲ್ಲಿ ಮಂಗೇಶನು ಮೂರನೆಯ ಮಗುವಾಗಿ, ಎರಡನೆಯ ಮಗನಾಗಿ

1874ರ ಫೆಬ್ರುವರಿ 22ರಂದು ಜನಿಸಿದನು. ಈಗ ಬಂಟವಾಳದ ಸರಕಾರೀ ಆಸ್ಪತ್ರೆಯಿರುವ – ನೇತ್ರಾವತಿಯ ಸನ್ನಿಹದ ಸ್ಥಳದಲ್ಲಿದ್ದ ಹುಲ್ಲಿನ ಮನೆಯೇ ಜನ್ಮಸ್ಥಳ. ರಾಮಪ್ಪಯ್ಯನ ಸದಾಚಾರ, ದೈವಭಕ್ತಿ, ಸರಳತೆ, ಮೃದುನುಡಿಗಳು ಆ ಪ್ರದೇಶದಲ್ಲೇ ಪ್ರಸಿದ್ಧವಾಗಿದ್ದರೆ ಸೀತಮ್ಮ ಧಾರ್ಮಿಕಳೂ ಪರೋಪಕಾರಿಯೂ ಆಗಿದ್ದಳು. ಪಂಜೆಯವರ ಮನೆ ಭಜನೆ, ಕೀರ್ತನೆ, ಪ್ರವಚನಗಳಿಗೆ ಆಶ್ರಯಸ್ಥಾನವಾಗಿ ಭಾವುಕರನ್ನು ಆಕರ್ಷಿಸುತ್ತಿತ್ತು. ತುಕಾರಾಮ, ಪುರಂದರದಾಸ, ಕನಕದಾಸ, ಅಪ್ಪಯ್ಯ ಕವಿಗಳ ರಚನೆಗಳನ್ನು ಮಂಗೇಶನು ತನ್ನ ಎಳವೆಯಲ್ಲಿಯೇ ಕೇಳಿ, ಹಾಡಿಬಲ್ಲನು. ಪುರಾಣಗಳ ಪರಿಜ್ಞಾನ, ಸಂಗೀತಪ್ರೇಮ, ವಾಚನಾಭಿರುಚಿಗಳನ್ನು ತಾಯಿಯಿಂದ ಪಡೆದ ಈ ಬಾಲಕನ ಸಂತೋಷಕ್ಕಾಗಿ ತಾಯಿಯು ಸೊಗಸಾದ ಕತೆಗಳನ್ನು ಹೇಳುತ್ತಿದ್ದಳಂತೆ. ತನ್ನ ಕತೆಗಳನ್ನು ಕೇಳುತ್ತಿರುವ ಮಗನು ಕನ್ನಡದ ಪ್ರಪ್ರಥಮ ಸ್ವತಂತ್ರ ಸಣ್ಣಕತೆಗಾರನಾಗುವನೆಂದು ಆಕೆ ಊಹಿಸಿರಲಿಕ್ಕಿಲ್ಲ. ಬಂಧುಗಳ ಮೇಲಿರುವ ಅಪಾರ ಪ್ರೇಮವನ್ನೂ ಮಂಗೇಶನು ತನ್ನ ತಾಯಿಯಿಂದ ಪಡೆದಿರಬೇಕು.

ಆಣೆ, ದುಗ್ಗಾಣಿಗಳ ವ್ಯವಹಾರಕ್ಕೆ ಹೆಸರು ಪಡೆದ ಬಂಟವಾಳದ ಪರಿಸರವು ಸಾಂಪ್ರದಾಯಿಕ ಸಂಸ್ಕೃತಿಯಲ್ಲಿ ಬರಡಾಗಿರಲಿಲ್ಲ. ಅಲ್ಲಿನ ಜಾತ್ರೆ, ಉತ್ಸವ, ತೇರು ಮೆರವಣಿಗೆ, ಊಟ, ದೀಪೋತ್ಸವಗಳು ಮಂಗೇಶನ ಕಣ್ಮನಗಳಿಗೆ ಹಬ್ಬದೂಟವಾಗಿದ್ದವು. ತಮ್ಮಂದಿರಾದ ಶಿವ ಮತ್ತು ಶಂಕರರೊಂದಿಗೆ ಬಂಟವಾಳದ ಮೂಲೆ ಮೂಲೆಗಳನ್ನು ಸುತ್ತುತ್ತಾ, ಬೇಕಾದಂತೆ ಆಡುತ್ತಾ ಕಾಲ ಕಳೆಯುತ್ತಿದ್ದನು. ಹಳ್ಳಿಯ ಆಟಗಳಾದ ಕುಟ್ಟಿದೊಣ್ಣೆ, ಗೋಲಿಯಾಟಗಳು ಮಂಗೇಶನಿಗೂ ಪ್ರಿಯ

ವಾಗಿದ್ದವು. ಬಂಟವಾಳದ ಜನರ ಬಾಳಿನ ಹಾಸುಹೊಕ್ಕಾಗಿರುವ ಲೀಲಾಮಯಿ ನೇತ್ರಾವತಿಯಂತೂ ತನ್ನ ವಿನ್ಯಾಸಗಳಿಂದ ಬೇಕಾದಷ್ಟು ಸಾಹಸ ಸಂತಸಗಳನ್ನು ಒದಗಿಸುತ್ತಿದ್ದಿರಬೇಕು. ಪ್ರಯಾಣಿಕರ ಯಾನ ಮತ್ತು ಹೇರುಗಳ ಸಾಗಾಟವೆಲ್ಲವೂ ನದಿ ಮೂಲಕವೇ. ಜಿಲ್ಲೆಯ ಪ್ರಥಮವಾದ ಮೋಟಾರು ಸರ್ವಿಸು ಬಂಟವಾಳಕ್ಕೆ ಆಗಿತ್ತು. (ಅದಿನ್ನೂ ಬಂದಿಲ್ಲ). ನದಿಯ ಅಬ್ಬರ, ಆವೇಶ, ಉಬ್ಬು, ನರ್ತನಗಳು ಮಂಗೇಶನ ಹೃದಯ ದಲ್ಲಿ ಕಾವ್ಯದ ಸೆಲೆಗಳನ್ನು ಸ್ಫುರಿಸುತ್ತಿದ್ದಿರಬೇಕು. ತೆಂಕಣ ಗಾಳಿಯಂತಹ ಕವನಕ್ಕೆ ಬಾಲ್ಯದ ಅನುಭವವೇ ತಳಹದಿಯಾಗಿರ ಬೇಕು. ನೇತ್ರಾವತಿಯಲ್ಲಿ ಈಜಲು ಹೋಗಿದ್ದಾಗ ಪ್ರಾಣಾಪಾ ಯಕ್ಕೆ ಒಳಗಾಗಿದ್ದ ತಮ್ಮಂದಿರ ರಕ್ಷಣೆಗಾಗಿ ನೀರಿಗೆ ಧುಮುಕಿ ಸಾವಿನ ತೆಕ್ಕೆಯಲ್ಲಿದ್ದ ಮಂಗೇಶನನ್ನೂ, ಸೋದರರನ್ನೂ ಹಳ್ಳಿಗ ನೊಬ್ಬನು ರಕ್ಷಿಸಿದನಂತೆ. ತಲೆಯ ಹಿಂಭಾಗದಲ್ಲಿದ್ದ ಶಿಖೆ ಯಿಂದಾಗಿ ರಕ್ಷಣೆಯು ಸಾಧ್ಯವಾಯಿತಂತೆ. ಅದಿಲ್ಲವಾಗಿದ್ದರೆ ಪಂಜೆಯವರ ಬಾಳಿನ ಕತೆಗೆ ಅಂದೇ ಮುಗಿತಾಯವಾಗುತಿತ್ತು. ಕನ್ನಡ ಭಾಗ್ಯಶ್ರೀಯು ಅಂತಾಗಗೊಡಲಿಲ್ಲ.

ತಂದೆಯ ಶಾನುಭಾಗ ವೃತ್ತಿಯಿಂದ ದೊರಕುವ ಆದಾಯ ದಿಂದ ಸಂಸಾರ ನಡೆಯಬೇಕಿದ್ದ ಕಾರಣ ಮಂಗೇಶನಿಗೆ ಶ್ರೀಮಂತಿಕೆಯ ವಿಲಾಸ, ವೈಭವಗಳಿರಲಿಲ್ಲ. ಬದಲಾಗಿ ನೀರು ಸೇದುವ ಮುಂತಾದ ಗೃಹಕೃತ್ಯಗಳಲ್ಲಿ ಸಹಕರಿಸಬೇಕಾ ಗುತ್ತಿತ್ತು. ಸ್ವಾವಲಂಬನ, ಕಷ್ಟಸಹಿಷ್ಣುತೆ ಮುಂತಾದ ಅಪೇಕ್ಷಣೀಯ ಗುಣಗಳನ್ನು ಮಂಗೇಶನು ಬಾಲ್ಯದಲ್ಲೇ ತನ್ನಲ್ಲಿ ಮೈಗೂಡಿಸಿರಬೇಕು.

ಬಾಲ್ಯದಿಂದಲೇ ಮಂಗೇಶನು ಹಾಸ್ಯಪ್ರಿಯನೂ ವಾಗ್ವಿಲಾಸಿಯೂ ಆಗಿದ್ದನು, ಅಂಬಿನ ವೇಗದಿಂದ ಮರುಮಾತನ್ನೆಸೆಯಬಲ್ಲ ಅವನ ಸಾಮರ್ಥ್ಯವನ್ನು ಸೂಚಿಸುವ ಅನೇಕ ನಿದರ್ಶನಗಳನ್ನು ಪಂಜೆಯವರ ಸಮಕಾಲೀನರು ಹೇಳುತ್ತಿದ್ದರಂತೆ. ಎಳೆಪ್ರಾಯದಲ್ಲೇ ಕಾವ್ಯಪ್ರೇಮವು ಹಲತೆರಗಳಲ್ಲಿ ಪ್ರಕಟವಾಗುತ್ತಿತ್ತಲ್ಲದೆ ಮಾತಿನ ಪ್ರಾಸ, ಗೀತ, ಧ್ವನಿಗಳಲ್ಲಿ ಮೋಹವಿದ್ದು–ಪ್ರಾಸ ಶಬ್ದತರಂಗಗಳಲ್ಲಿ ಅರ್ಥವು ಸಾಮಾನ್ಯವಾಗಿ ಗೋಚರಿಸದಲ್ಲಿಯೂ ಅರ್ಥವನ್ನು ಕಲ್ಪಿಸುವ ಶಕ್ತಿಯು ಮಂಗೇಶನಲ್ಲಿ ಬಾಲ್ಯದಲ್ಲೇ ಇತ್ತು. ‹‹ಬರಿಯ ಪ್ರಾಸ, ಶಬ್ದ ತಾರಂಗಿತ್ವ, ಧ್ವನಿಯಿಂದ ಉಂಟಾಗುವ ಹಾಸ್ಯಗಳಲ್ಲಿ ಆಟವಾಡುತ್ತಿದ್ದ ಅವರಿಗೆ-ಬಹು ತೀವ್ರದಲ್ಲೇ ಕವನರಾಜ್ಯದಲ್ಲಿ ಶಬ್ದಬ್ರಹ್ಮಕ್ಕಿರುವ ಶಕ್ತಿಯ ಅರಿವು ಆಗತೊಡಗಿತು"* ಕೊಂಕಣಿ, ಕನ್ನಡ ಭಾಷೆಗಳಲ್ಲಿ ಪ್ರಾಸಬದ್ಧವಾದ ಪದಜೋಡಣೆ, ಗಾದೆಗಳನ್ನು ರಚಿಸಿ ತಾಯಿ ಬಳಿಗೋಡಿ ಹೆಮ್ಮೆಯಿಂದ ಮಂಗೇಶನು ಹೇಳಿ ಹಿಗ್ಗುತ್ತಿದ್ದನಂತೆ. ತಮ್ಮಂದಿರಾದ ಶಿವ ಮತ್ತು ಶಂಕರರು ಮಂಗೇಶನ ಇತರ ಸಾಹಸಗಳಲ್ಲಿ ಪಾಲುಗಾರರಾದಂತೆ ಕವನ ಮತ್ತು ಪ್ರಾಸ ಹೆಣೆಯುವ ಆಟಗಳಲ್ಲೂ ಭಾಗವಹಿಸಿ ಸಂತೋಷಿಸುತಿದ್ದರು.

ಬಾಲ್ಯದ ವಿನೋದ ಕವನಗಳಲ್ಲಿ ಹೆಚ್ಚಿನವು ತಾಯ್ನುಡಿಯಾದ ಕೊಂಕಣಿಯಲ್ಲಿದ್ದುದು ಸಹಜ. ತಾಯೊಡನೆ ಅಥವಾ ಸೋದರರಲ್ಲಿ ಹೇಳಿದ ಮಂಗೇಶ ಕೊಂಕಣಿ ರಚನೆಗಳು ಊರಲ್ಲೂ, ಆ ಪ್ರದೇಶದಲ್ಲೂ ಜನಪ್ರಿಯವಾಗಿ ಇಂದೂ

* ಪಂಜೆ ರಾಮರಾಯರು; ಪಂಜೆಯವರ ನೆನಪಿಗಾಗಿ ಪು. ೬೫.

ಜನರ ನಾಲಗೆಗಳಲ್ಲಿವೆ. ತಾಯಿ ಮೆಚ್ಚುಗೆ ಮತ್ತು ತಮ್ಮಂದಿರ ಸಹಕಾರಗಳಿಂದ ಉತ್ತೇಜಿತನಾದ ಮಂಗೇಶನು ಕನ್ನಡದಲ್ಲೂ ಇಂತಹ ರಚನೆಗಳನ್ನು ಮಾಡಲು ಆರಂಭಿಸಿದನು. ಶಾಲಾ ಮಕ್ಕಳಲ್ಲಿ ಜನಪ್ರಿಯವಾಗಿರುವ ಹಿಂದೆ ಮುಂದೆ ಓದಿದರೂ ಒಂದೇ ಆಗುವ "ಕುಬೇರನಿಗೇನಿರಬೇಕು ?" ಇದು ಪಂಜೆಯವರ ವಿನೋದ ಸೃಷ್ಟಿಯೆಂದು ಈಗಿನವರಿಗೆ ತಿಳಿದಿಲ್ಲ. ಅಕ್ಷರಗಳನ್ನು ಪಲ್ಲಟಿಸಿ ಯಾ ವ್ಯತ್ಯಂತರಿಸಿ ಹಾಸ್ಯವನ್ನುಂಟು ಮಾಡುವುದರಲ್ಲೂ ಜಾಣರಿದ್ದರವರು. 'ಅನ್ನದ ಅಗುರೇ ಚಿನ್ನದ ಚಿಗುರು'—ಈ ಮಾತು 'ಅನ್ನದ ಚಿಗುರೇ ಚಿನ್ನದ ಅಗುರೆಂದಾಗುತ್ತದೆ. ಹಲಕಾಲದ ಬಳಿಕವೂ ಪಂಜೆಯವರಲ್ಲಿ ಈ ಪ್ರವೃತ್ತಿ ಇದ್ದುದನ್ನು ಕಾಣಬಹುದು. ಹೀಗೆಯೇ 'ಕದನೆ ಬಾಯಿ ತಿಮ್ಮಪ್ಪ ಬದನೆ ಕಾಯಿ ತಿಮ್ಮಪ್ಪ ಮಾಸ್ತರೆಂದಾದದು ಇದೆ.

ಬಂಟವಾಳದ ಪ್ರಾಥಮಿಕ ಶಾಲೆಯಲ್ಲಿ ಮಂಗೇಶನ ಮೇಲೆ ಬೀರಿದ ಪ್ರಭಾವಗಳ ಬಗ್ಗೆ ನಮಗೇನು ತಿಳಿದು ಬರುವುದಿಲ್ಲ. ಚುರುಕಾದ ಬುದ್ಧಿಯ, ಹುಲುಸಾದ ಮೆದುಳಿನ ಈ ಹುಡುಗನು ಬರಿದೆ ಕುಳಿತಿರಲಾರನು. ಶಾಲೆಯ ಹೊರಗಿನ ಆಟಗಳಲ್ಲಿ ಆತನು ಸಂತೋಷಿಸುತಿದ್ದನೆಂಬುದು ಖಚಿತ *ಗಂಜೀಪು, ಗಜ್ಜುಗದಾಟಗಳನ್ನು ಆಡುತ್ತಿರುವಾಗ ಹಾಸ್ಯ ಪರಿಹಾಸ್ಯ, ಒಗಟು ಮತ್ತಿತ್ತರ ಬಾಯಿ ವಿನೋದಗಳಿಂದ ಆಟದ ರಂಗೇರಿಸುವವನು ಮಂಗೇಶನೇ. ಸೋದರರೊಂದಿಗೆ ಚದುರಂಗ ವಾಡುತ್ತಲೂ ಇದ್ದನಂತೆ.

---

* ಈಗ ಮಾಯವಾಗಿರುವ 100 ಎಲೆಗಳೊಂದಿಗೆ ಆಡುವ ಆಟ. ವಿಷ್ಣುವಿನ ಅವತಾರವನ್ನು ಸೂಚಿಸುವ ಎಲೆಗಳವು.

ಮಂಗೇಶನಲ್ಲಿ ಶಿಕ್ಷಕ ಪ್ರವೃತ್ತಿಯು ಬಾಲ್ಯದಲ್ಲೇ ಎದ್ದು ಕಾಣುತ್ತಿತ್ತು. ತಿಳಿಯುವುದರಲ್ಲಿ ಹೆಚ್ಚಿನ ಉತ್ಸಾಹ. ಅಂತೆಯೇ ತಿಳಿದುದನ್ನು ಹಂಚುವುದರಲ್ಲಿ ಉತ್ಸಾಹ, ಸಂತೋಷ. (ಈ ಗುಣ ಪಂಜೆಯವರಲ್ಲಿ ಕೊನೆಯ ತನಕವೂ ಇದ್ದಿತು.) ಶಾಲೆಯಾಟವು ಮಂಗೇಶನ ಪ್ರಿಯವಾದ ಆಟ, ಆತನ ಮನಸ್ಸಿನ ಒಲವನ್ನು ಸೂಚಿಸುವ ಆಟ. ಸೋದರರನ್ನು, ನೆರೆಯ ಮಕ್ಕಳನ್ನು ಕೂಡಿಸಿಕೊಂಡು ನಡೆಸುತ್ತಿದ್ದ ಈ ಶಾಲೆಗೆ ಮಂಗೇಶನೇ ಗುರು. ಆತನು ಮಂಗಳೂರಿಗೆ ತೆರಳುವ ತನಕವೂ ಇದ್ದ ಈ ಶಾಲೆಯಿಂದ ಹಲವರು ಜಾಣರಾಗಿದ್ದರಂತೆ. 'ಮಕ್ಕಳಲ್ಲಿ ಈ ಶಾಲೆಯಾಟವು ನವೀನ ವಿಚಾರವಲ್ಲ – ಹಿಂದಿಗೂ, ಇಂದಿಗೂ ಎಳೆಯರನ್ನು ಆಕರ್ಷಿಸುವ ವಿನೋದವಾಗಿದೆ. ಆದರೆ ಪಂಜೆಯವರ ಜೀವನದಲ್ಲಿ ಈ ಶಾಲೆಯಾಟವು ವಿಧಿಯ ವೈಚಿತ್ರ್ಯವೆಂಬಂತೆ ಅವರು ಎಫ್. ಎ. ತೇರ್ಗಡೆಯಾದಂದಿನಿಂದ ಅವರನ್ನು ಶಾಲೆಗೇನೆ ಬಿಗಿದಿತ್ತು.'

ಹೈಸ್ಕೂಲ್ ಶಿಕ್ಷಣಕ್ಕಾಗಿ ಮಂಗೇಶನು ಮಂಗಳೂರಿಗೆ ಹೊರಟಾಗ ತಂದೆಯಾದ ಶಾನುಭಾಗ ರಾಮಪ್ಪಯ್ಯನವರು ಆರ್ಥಿಕ ಸಮಸ್ಯೆಗಳಿಗೊಳಗಾಗಿದ್ದರು. ಮಂಗೇಶನ ವಿದ್ಯಾಭ್ಯಾಸವು ಆರ್ಥಿಕವಾಗಿ ಸುಲಭವಾಗಿರಲಿಲ್ಲ ಊಟ ವಸತಿಗೆ ಕೆಲವು ಬಂಧುಗಳ ನೆರವಿತ್ತು. ಓದಿನಲ್ಲಿ ಜಾಣನಿದ್ದ ಕಾರಣ ವಿದ್ಯಾರ್ಥಿ ವೇತನ ಲಭಿಸಿರಬೇಕು. ಎರವಾಗಿ ಪಡೆದ ಪುಸ್ತಕಗಳನ್ನು ನಡುಮಧ್ಯಾಹ್ನದ ಅತಿ ಬೆಳಕಲ್ಲೂ ರಾತ್ರಿಯ ಅರೆ ಬೆಳಕಲ್ಲೂ ಓದಿ ಒಂದು ಕಣ್ಣಿನ ಶಕ್ತಿಯು ಕುಂದಿಹೋಯಿತು. ಇನ್ನೂ ವಿದ್ಯಾರ್ಥಿಯಾಗಿರುವಾಗಲೇ ತಂದೆಗೆ ಕಠಿಣ ಕಾಯಿಲೆಯ

ದುರ್ವಾರ್ತೆಯು ತಲುಪಿತು. ಅಣ್ಣನಾದ ಕೊಗ್ಗ (ಕೃಷ್ಣ)ನು ದೂರದ ಮದರಾಸಿನಲ್ಲಿ. ಮಂಗಳೂರಿನಿಂದ ತಂದೆಯನ್ನು ನೋಡಲು ಹೊರಟ ಮಂಗೇಶನು ದೋಣಿಗಾಗಿ ನದಿಯಂಚಿಗೆ ಬಂದಾಗ ಎಲ್ಲಾ ದೋಣಿಗಳೂ ಹೋಗಿದ್ದವು. ರಾತ್ರಿಯ ಹೊತ್ತು, ಸುಮಾರು 16 ಮೈಲಿನ ದೂರ. ಏನು ಮಾಡೋಣ? ಕಾಲ್ನಡೆಯಲ್ಲೇ ಒಂಟಿಯಾಗಿ ಬಂಟವಾಳದ ಮನೆತಲುಪಿದಾಗ ಮೃತ್ಯುಶಯ್ಯೆಯಲ್ಲಿದ್ದ ತಂದೆಯು ಮಗನ ಬರೋಣಕ್ಕಾಗಿ ಮಾತ್ರ ಕಾದಂತಿತ್ತು. ಮಗನಿಗೆ ಕೊನೆಯ ಉಪದೇಶವನ್ನಿತ್ತು ಈ ಲೋಕದಿಂದ ತೆರಳಿದರು. "ಕುಡಿಯಬೇಡ, ನೀತಿಯನ್ನು ಬಿಡಬೇಡ, ಎಷ್ಟೇ ಕಷ್ಟ ಬಂದರೂ ತಂಗಿ ತಮ್ಮಂದಿರನ್ನು ತೊರೆಯಬೇಡ". ಈ ಉಪದೇಶವನ್ನು ಪಂಜೆಯವರು ತನ್ನ ಕೊನೆಯ ಗಳಿಗೆಯವರೆಗೂ ಪಾಲಿಸಿದ್ದರು. ಅಣ್ಣನಾದ ಕೊಗ್ಗ (ಕೃಷ್ಣ)ರಾಯರು ಉದ್ಯೋಗದಲ್ಲಿ ಮುಂಬಯಿಯಲ್ಲಿ ನೆಲಸಿದರು. ಅಂತಾಗಿ ಸಂಸಾರದ ಭಾರವು ಮಂಗೇಶನ ಮೇಲೆಯೇ ಬಿದ್ದಿತು.

ತನ್ನ 16ನೆಯ ವಯಸ್ಸಲ್ಲೇ ಸಂಸಾರದ ನೊಗ ಮೇಲಾಗಿ ಚಿಕ್ಕಪ್ಪನ ಸಾಲದಿಂದಾಗಿ ಆಸ್ತಿಯೂ ಹೋದುದರಿಂದ ಮಂಗೇಶನೇ ದಿನಕ್ಕೆ 16 ತಾಸುಗಳಷ್ಟು ದುಡಿದು ತನ್ನವರನ್ನು ಪೋಷಿಸಬೇಕಾಯಿತು. ಸುದೈವದಿಂದ ಮಂಗೇಶನಿಗೆ ಸಾಕಷ್ಟು ಟ್ಯೂಷನ್‌ಗಳು ದೊರಕುತ್ತಿದ್ದವು. ತನ್ನವರನ್ನು ಪೋಷಿಸುವುದಕ್ಕಾಗಿ ಎಂತಹ ಶ್ರಮವನ್ನು ವಹಿಸಲೂ ಸಿದ್ಧನಿದ್ದನು ಮಂಗೇಶನು. ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಶಿಕ್ಷಣ ಮುಗಿದ ಮೇಲೆ ಮುಂದೇನೆಂಬ ಪ್ರಶ್ನೆ. ಗಣಿತದಲ್ಲಿ ವಿಶೇಷ ಆಸಕ್ತಿ. ಆ ವಿಷಯದೊಂದಿಗೆ ಬಿ. ಎ., ಮಾಡಬೇಕಾದರೆ

ಮದರಾಸಿಗೆ ಹೋಗಬೇಕು. ಅದು ಅಸಾಧ್ಯವಾದ ಕಾರಣ ಸ್ಥಳೀಯ ಸೈಂಟ್ ಅಲೋಶಿಯಸ್ ಕಾಲೇಜಲ್ಲೇ ಇತಿಹಾಸ ಮತ್ತು ಅರ್ಥಶಾಸ್ತ್ರಗಳೊಂದಿಗೆ ಬಿ. ಎ. ಕೋರ್ಸನ್ನು ಕಲಿಯಲು ಪ್ರವೇಶಪಡೆದನು. ಆ ದಿನಗಳಲ್ಲಿ ಪಂಜೆಯವರನ್ನು ಪದೇ ಪದೇ ಕಾಣುತ್ತಿದ್ದ ಮಂ. ಗೋವಿಂದ ಪೈಯವರು ಅವರ ವಿದ್ಯಾರ್ಥಿ ಜೀವನದ ಬಗ್ಗೆ ಸ್ವಾರಸ್ಯವಾದ ವಿವರಗಳನ್ನು ಕೊಟ್ಟಿದ್ದಾರೆ* ಅವರ ಸರಸವಾದ ಮಾತುಗಾರಿಕೆ, ಇಂಪಾದ ಹಾಡುಗಳನ್ನು ನೆನವರಿಸಿದ್ದಾರೆ. 'ಮೆಚ್ಚಿದೆನು ಗಾನಲೋಲೆ ಮತ್ತು 7 ಭಾಷೆಗಳ 7 ಚರಣಗಳಿರುವ 'ತ್ವಂ ರಾಮಚಂದ್ರ' ಕವನಗಳನ್ನು ಪೈಯವರು ಬರೆದು ತೆಗೆದುಕೊಂಡಿದ್ದರಂತೆ.

ಪಂಜೆಯವರು 1895ರಲ್ಲಿ ಬಿ. ಎ. ಕೋರ್ಸಿನ ಇಂಗ್ಲಿಷ್ ಮತ್ತು ಕನ್ನಡ ವಿಭಾಗಗಳಲ್ಲಿ ತೇರ್ಗಡೆಗೊಂಡರು ಈ ಮಧ್ಯೆ ಅಂದರೆ 1894ರಲ್ಲಿ ಬೆನಗಲ್ ಕುಟುಂಬದ ಗಿರಿಜಾಬಾಯಿಯವರೊಂದಿಗೆ ವಿವಾಹವು ಜರಗಿತು. ಈ ಮದುವೆಯಿಂದಾಗಿ ಕನ್ನಡದ ಸೇವೆಯಲ್ಲಿ ಹೆಸರನ್ನು ಗಳಿಸಿದ ಬೆನಗಲ್ ರಾಮರಾಯರು ಭಾವ ನೆಂಟರಾದರು; ಕರ್ನಾಟಕದ ಭೂಪಟವನ್ನು ಪ್ರಪ್ರಥಮವಾಗಿ ಕಲ್ಪಿಸಿ, ಚಿತ್ರಿಸಿದ ಬೆನಗಲ್ ಮಂಜುನಾಥಯ್ಯನವರು ಮಾವನಾದರು. ರಾಮರಾಯರೊಂದಿನ ನಂಟು ಸಾಹಿತ್ಯದ ನಂಟೂ ಆಯಿತು. ಭಾವನೆಂಟರೀರ್ವರು ಸುವಾಸಿನಿ ಮಾಸಿಕದ ಸಂಪಾದನ ಮತ್ತು ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಕಾರ್ಯಗಳಲ್ಲಿ ಜತೆಯಾಗಿ ದುಡಿದರು. ಕನ್ನಡಕ್ಕಾಗಿ ಭಾವನೆಂಟರು ಜತೆಯಾಗಿ ದುಡಿದುದು ತೀರಾ ವಿರಳವಾಗಿರಬೇಕು.

---

* ಪಂಜೆಯವರ ನೆನಪಿಗಾಗಿ, ಪು ೯೫-೧೦೮

ಬಿ. ಎ. ಪರೀಕ್ಷೆ ಪೂರ್ಣವಾಗಿ ಪಾಸುಮಾಡದ ಪಂಜೆಯವರಿಗೆ ಸರಕಾರಿ ಕಾಲೇಜಿನ ಅಸಿಸ್ಟಾಂಟ್ ಕನ್ನಡ ಪಂಡಿತ ಹುದ್ದೆಯು ದೊರಕಿತು. ಮುದ್ದಣನು ಈ ಹುದ್ದೆಗೆ ಅಭ್ಯರ್ಥಿಯಾಗಿದ್ದನೇಬುದೂ, ಇಂಗ್ಲಿಷನ್ನು ಚೆನ್ನಾಗಿಬಲ್ಲರೆಂಬ ಕಾರಣಕ್ಕಾಗಿ ಈ ಹುದ್ದೆಯು ಪಂಜೆಯವರಿಗೆ ದೊರಕಿದ ವಿಚಾರ ಲೋಕವಿಖ್ಯಾತವಾಗಿದೆ. ಮುದ್ದಣನ ಪಾಂಡಿತ್ಯದ ಮೇಲ್ಮೆಯು ಅರಿವಾದಾಗ ಆತನಿಗೆ ಅವರು ಬರೆದ ಪತ್ರದ ಒಕ್ಕಣೆಯು ಸೊಗಸಾಗಿದೆಯಲ್ಲದೆ ಅವರ ಒಳ್ಳೆಯತನವನ್ನು ಸೂಚಿಸುತ್ತದೆ, "ಬತ್ತದ ಸಿಪ್ಪೆಯನ್ನು ಕುಟ್ಟತಕ್ಕ ಒನಕೆಯನ್ನು ಕನ್ನಡ ಬರಹ ಬರೆಯುವುದಕ್ಕೆ ತಂದರು; ಚಿತ್ರವನ್ನು ಬಿಡಿಸುವ ಬಣ್ಣದ ಗರಿಯನ್ನು ಕಿವಿಯ ತುರಿಕೆಗೆ ಕುಗ್ಗೆಕಡ್ಡಿಯನ್ನಾಗಿ ಮಾಡಿದರು." ಇಲ್ಲಿ ತಾನು ಒನಕೆ, ಮುದ್ದಣನು ಬಣ್ಣದ ಗರಿ. ಆ ಬಳಿಕವೂ ಮುದ್ದಣನೊಂದಿಗೆ ಪತ್ರವ್ಯವಹಾರವಿತ್ತಲ್ಲದೆ, ಮಂಗಳೂರಲ್ಲಿ ಪರಸ್ಪರ ಮಾತುಕತೆಗಳೂ ಆಗಿತ್ತು.

ಮಂಗಳೂರಿನ ಸರಕಾರಿ ಕಾಲೇಜಿನ ಕನ್ನಡ ಅಧ್ಯಾಪಕರಾಗಿ ಪಂಜೆಯವರು ತುಂಬಾ ಮೆಚ್ಚಿನ ಗುರುಗಳಾದರು. ರಸವತ್ತಾದ ಪಾಠಗಳೇ ಅದಕ್ಕೆ ಮುಖ್ಯಕಾರಣ. ಅಭಿನಯಕಲೆ, ಸುಶ್ರಾವ್ಯಕಂಠ, ಗಮಕಜ್ಞಾನ, ಕಲ್ಪನಾವಿಲಾಸ, ರಸಪ್ರಜ್ಞೆ, ಉತ್ಸಾಹ ಸಾಹಿತ್ಯಪ್ರೇಮ ಮುಂತಾದ ಗುಣಗಳು ಅವರಲ್ಲಿ ಮನೆಮಾಡಿದ್ದರಿಂದ ಆ ತನಕ ಸಪ್ಪೆಯಾಗಿದ್ದ ಪಾಠಗಳ ಸಾಲುಸಾಲೂ ಈಗ ರಸಮಯವಾಗುತ್ತಿದ್ದವು. ಪಂಜೆಯವರ ಶಿಷ್ಯರೆಲ್ಲಾ ಈ ಬಗ್ಗೆ ವಿಶೇಷವಾದ ಮೆಚ್ಚುಕೆಯನ್ನು ಸೂಚಿಸುವವರೇ. ಅವರ ಪಾಠದ ಕ್ರಮವನ್ನು ಬೈಂದೂರು ಆನಂದರಾಯರಿಂದ– ಅವರು ಶಿಷ್ಯರಾಗಿದ್ದರು– ತಿಳಿಯಬಹುದು."

ಪಂಜೆಯವರ ಪಾಠಪ್ರವಚನಗಳು ಆನಂದದಾಯಕವಾಗಿಯೂ ಅನುಭವ ಜ್ಞಾನಪೂರ್ಣವಾಗಿಯೂ ಇದ್ದವು. ಅವರು ಕ್ಲಾಸನ್ನು ಪ್ರವೇಶಿಸುವ ರೀತಿ ವಿಚಿತ್ರವಾಗಿತ್ತು. ಒಂದೊಂದು ವೇಳೆ ಎದುರಿನಿಂದ, ಒಂದೊಂದು ವೇಳೆ ಹಿಂದಿನಿಂದ, ಒಂದೊಂದು ವೇಳೆ ಬಲ ಅಥವಾ ಎಡಭಾಗದಿಂದ ಆ ದಿನದ ಪಾಠವನ್ನು ಕಲಕಂಠನಂತೆ ಹಾಡುತ್ತ ನಾಟಕದಲ್ಲಿ ಒಬ್ಬ ಪಾತ್ರಧಾರಿಯು ನೇಪಥ್ಯದಿಂದ ರಂಗಸ್ಥಳಕ್ಕೆ ಬರುವಂತೆ ಕ್ಲಾಸನ್ನು ಪ್ರವೇಶಿಸುತ್ತಿದ್ದರು. ಅವರಿಗೆ ಇತರ ಉಪಾಧ್ಯಾಯರಂತೆ ಕುರ್ಚಿಯ ಮೇಲೆ ಕುಳಿತುಕೊಳ್ಳುವ ಅಭ್ಯಾಸವಿರಲಿಲ್ಲ. ಕ್ಲಾಸಿನ ಮಧ್ಯ ಭಾಗದಲ್ಲಿ ನಿಂತುಕೊಂಡು ಪ್ರವಚನ ಮಾಡುವುದು ಅವರ ಕ್ರಮ. ಈ ರೀತಿ ಸರ್ವ ವಿದ್ಯಾರ್ಥಿಗಳ ಮನಸ್ಸನ್ನು ಲೋಹ ಚುಂಬಕದಂತೆ ತನ್ನ ಕಡೆಗೆ ಆಕರ್ಷಿಸಿಕೊಂಡು ಪ್ರವಚನ ಮಾಡುವುದಕ್ಕೆ ಆರಂಭಿಸುತ್ತಿದ್ದರು. ಕ್ಲಾಸಿನಲ್ಲಿ ಪದ್ಯ ಹಾಡುವಾಗಲೂ ಗದ್ಯವನ್ನು ಓದುವಾಗಲೂ ಆಯಾ ರಸವನ್ನು ಉದ್ದೀಪನ ಮಾಡುವ ಶಕ್ತಿ ಅವರಲ್ಲಿತ್ತು. ಕುಮಾರವ್ಯಾಸನ ಅಥವಾ ಜೈಮಿನಿ ಭಾರತವನ್ನು ಹಾಡುವಾಗ "ಕಲಿಯುಗ ದ್ವಾಪರವಾಗುತ್ತಿತ್ತು." ಭೀಮಾರ್ಜುನ, ಕೃಪ, ದ್ರೋಣ, ಭೀಷ್ಮ, ಕರ್ಣಾದಿ ಸಿಂಹ ಶಾರ್ದೂಲಗಳು ನಮ್ಮ ಅಂತರ್ಯದಲ್ಲಿ ಸಿನೇಮಾ ಚಲಚ್ಚಿತ್ರದಂತೆ-ಹೊಳೆಯುತ್ತಿದ್ದವು. ಆರ್ಯಕೀರ್ತಿಯನ್ನು (ಪ್ರಥಮಭಾಗ) ಓದುವಾಗ ನಮ್ಮಲ್ಲಿ ವೀರಾವೇಶವನ್ನುಂಟುಮಾಡಿ ರಾಜಸ್ತಾನದ ರಣಕ್ಷೇತ್ರಗಳಲ್ಲೇ ನಾವು ಎದೆಗೊಡುತ್ತೇವೋ ಎನ್ನುವಂತೆ ಭಾವೋನ್ಮತ್ತರಾಗುತ್ತಿದ್ದೆವು."

ಸರಕಾರಿ ಕೊಲೇಜಿನ ಅಲ್ಪಾವಧಿಯ ಉದ್ಯೋಗದಲ್ಲಿ ಒಂದೆರಡು ಸಂಗತಿಗಳು ಗಮನಾರ್ಹವಾದವುಗಳು. ಗಣಿತದ

ಪ್ರಾಧ್ಯಾಪಕರು ಇಲ್ಲದ ವೇಳೆಗಳಲ್ಲಿ ಕ್ಲಾಸಿನಲ್ಲಿ ಗುಲ್ಲಾಗದಂತೆ ನೋಡಿಕೊಳ್ಳಲು ಪ್ರಿನ್ಸಿಪಾಲರು ಪಂಜೆಯವರನ್ನು ಕ್ಲಾಸಿಗೆ ಕಳುಹಿಸುವುದಿತ್ತು. ಬಾಲ್ಯದಿಂದಲೇ ಗಣಿತದ ಪ್ರೇಮಿಯಾದ ಅವರು ಗಣಿತವನ್ನು ಸರಳವಾಗಿಯೂ ರಸವತ್ತಾಗಿಯೂ ಕಲಿಸುವ ಸುದ್ದಿಯು ಪ್ರಿನ್ಸಿಪಾಲರಿಗೂ ತಲಪಿತು. ಇನ್ನೂ ಪದವೀಧರರಾಗದ ವ್ಯಕ್ತಿಯು ಗಣಿತವನ್ನು ಕಲಿಸುವುದು ನಿಯಮಬಾಹಿರವಾಗಿತ್ತು.

ಪಂಜೆಯವರಿಗೆ ತನ್ನ ಶಿಷ್ಯರ ಮೇಲೆ ಹೆಚ್ಚಾದ ಮಮತೆ, ಅಭಿಮಾನ. ಕ್ಲಾಸಿನ ಹೊರಗೆ ಸ್ನೇಹಭಾವದಿಂದ ಬೆರೆತು ಆಟಗಳಲ್ಲಿ ಭಾಗವಹಿಸುತ್ತಿದ್ದರು. ವಿದ್ಯಾರ್ಥಿಗಳೆಲ್ಲರೂ ಅವರ ಬುದ್ಧಿಚಾತುರ್ಯಕ್ಕೂ, ಸರಳತೆಗೂ, ರಸಿಕತೆಗೂ ಮಾರು ಹೋಗಿದ್ದರು. 'ಕ್ಲಾಸಿನ ಹೊರಗೆ ಅವರು ನಮ್ಮಲ್ಲಿ ಅಷ್ಟು ಅನ್ಯೋನ್ಯವಾಗಿದ್ದರು, ಕ್ಲಾಸಿನಲ್ಲಿ ಅವರ ಚುಚ್ಚುವ ಪರಿಹಾಸ್ಯಕ್ಕೆ ಎಲ್ಲಾ ಹುಡುಗರು ಬೆದರುತ್ತಿದ್ದುದರಿಂದ, ಉಪಾಧ್ಯಾಯರಿಗೆ ತೋರಿಸತಕ್ಕ ಗೌರವಕೊಟ್ಟು ಬಹು ವಿಧೇಯರಾಗಿರುತ್ತಿದ್ದರು.... ಪಂಡಿತರೊಂದಿಗೆ ಪಂಡಿತನಾಗಿಯೂ. ಬೇರೆ ಉಪಾಧ್ಯಾಯರೊಡನೆ ಉಪಾಧ್ಯಾಯನಾಗಿಯೂ, ಹುಡುಗರೊಂದಿಗೆ ಹುಡುಗನಾಗಿಯೂ ವರ್ತಿಸುತ್ತಿದ್ದರು'' ಇದು ಅವರ ಶಿಷ್ಯರೊಬ್ಬರ ಅನುಭವದ ಮಾತು.

ಹುಡುಗಾಟಿಕೆಯ ವಿನೋದಪ್ರವೃತ್ತಿಯು ಪಂಜೆಯವರ ವ್ಯಕ್ತಿತ್ವದ ಒಂದು ಅಂಗವಾಗಿತ್ತು. ಅವರು ಕನ್ನಡ ಪಂಡಿತರಾಗಿದ್ದಾಗಿನ ಒಂದು ವಿನೋದಪ್ರಸಂಗವಿಲ್ಲಿದೆ. ಜರಿಪೇಟವನ್ನು ಸೊಗಸಾಗಿ ತೊಟ್ಟುಕೊಂಡು ಬಂದ ಹಳ್ಳಿಯ ಗೌಡನನ್ನು ಕಂಡ ಪಂಜೆಯವರ ವಿದ್ಯಾರ್ಥಿಗಳು ಆ ಪೇಟಾವನ್ನುರುಳಿಸುವ ಬಗ್ಗೆ

ಮಾತಾಡುತ್ತಿರುವಾಗ ಗುರುಗಳಾದ ಮಂಗೇಶರಾಯರು ಆ ಕಾಫಿಕ್ಲಬ್ಬನ್ನು ಪ್ರವೇಶಿಸಿದರು. ವಿಚಾರವನ್ನೆ ತಿಳಿದುಕೊಂಡ ಅವರು "ಅಷ್ಟೆಯೇ, ಗೌಡನು ಸಿಟ್ಟಾಗದ ಹಾಗೆ ಅವನ ಪೇಟ ನೀವು ಯಾರಾದರೂ ಕೆಡಿಸಿ! ನಾನು ನಿಮ್ಮ ಇವತ್ತಿನ ಕಾಫಿ ಖರ್ಚು ಕೊಡುತ್ತೇನೆ. ನಿಮ್ಮಿಂದ ಆಗದಿದ್ದರೆ ನಾನು ಅದನ್ನು ಕೆಡಿಸುತ್ತೇನೆ. ನನ್ನ ಕಾಫಿಯ ಖರ್ಚನ್ನು ಕೊಡುತ್ತಿರಾ? " ಎಂದರಂತೆ. ಪಂಜೆಯವರೇ ಈ ಪ್ರಯೋಗವನ್ನು ನಡೆಸ ಬೇಕೆಂದು ವಿದ್ಯಾರ್ಥಿಗಳು ಬಲವಂತ ಮಾಡಿದಾಗ ಅವರು ಗೌಡನಿದ್ದಲ್ಲಿಗೆ ಹೋಗಿ ಆತನು ಮಂಗಳೂರಿಗೆ ಬಂದ ಕಾರಣ, ಮಳೆಬೆಳೆಗಳ ಪರಿಸ್ಥಿತಿ ಇತ್ಯಾದಿ ವಿಷಯಗಳನ್ನು ಕೇಳುತ್ತಾ, ಹಟತ್ತಾಗಿ ಚೇಳು ಚೇಳೆಂದು ಕೂಗಿ ಆತನ ಪೇಟವನ್ನುರುಳಿಸಿದರು ಪಂಜೆಯವರ ಆಟದ ಹೊಲಬನ್ನರಿಯದ ಗೌಡನು ತನ್ನನ್ನು ಚೇಳಿನ ಕಡಿತದಿಂದ ಪಾರುಮಾಡಿ ಕೋರ್ಟು ಕೆಲಸಕ್ಕೆ ವಿಳಂಬ ವಾಗದಂತೆ ಉಪಕರಿಸಿದ್ದಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದನಂತೆ. ವಿನೋದವು ಆಯಿತು, ಕೃತಜ್ಞತೆಯೂ ಸಿಕ್ಕಿತು. ವಿದ್ಯಾರ್ಥಿಗಳು ಪಂಜೆಯವರನ್ನು ಅಭಿನಂದಿಸಿದಾಗ 'ನಿಮ್ಮಂತಹ ಮಂಗಗಳ ಈಶನಾಗಬಹುದೆಂತಲೇ ನನಗೆ 'ಮಂಗೇಶ' ಎಂದು ನಾಮಕರಣ ಮಾಡಿದ ಹಾಗೆ ಕಾಣುತ್ತೆ' ಎಂದರು. ಪರಿಹಾಸದಲ್ಲಿ ತನ್ನನ್ನೂ ಬಿಟ್ಟಿರದ ಹಾಸ್ಯಗಾರರವರು.*

1904ರಲ್ಲಿ ಮದರಾಸಿಗೆ ಹೋಗಿ ತನ್ನ ಬಿ.ಎ. ಕೋರ್ಸನ್ನು ಮುಗಿಸಿದ ಪಂಜೆಯವರು ಮುಂದಿನ ವರ್ಷ (ತಾನು ಶಿಕ್ಷಕನಾಗಿಯೇ ಬಾಳಬೇಕೆಂಬ ಉದ್ದೇಶದಿಂದ) ಎಲ್.ಟಿ. ತರಬೇತಿಗಾಗಿ ಮತ್ತೆ ಮದರಾಸಿಗೆ ಹೋದರು. ಆರ್ಥಿಕವಾಗಿ

* ಪಂಜೆಯವರ ನೆನಪಿಗಾಗಿ, ಪುಟ ೧೬-೧೭

ಅನುಕೂಲವಿರಲಿಲ್ಲ. ಮಡದಿ ಮಕ್ಕಳನ್ನು ಮದರಾಸಿಗೆ ಒಯ್ದು ಬಂದ ಕಷ್ಟ, ನಷ್ಟಗಳನ್ನು ಸಹಿಸಿ ತರಬೇತಿಯನ್ನು ಮುಗಿಸಿ ಬಂದರು. ಮತ್ತೆ ಸರಕಾರಿ ಕೊಲೇಜಲ್ಲೇ ಹೆಚ್ಚು ತಲಬಿನ ಉದ್ಯೋಗವಾದರೂ ಅಲ್ಲಿ ಹೆಚ್ಚುಕಾಲ ನಿಲ್ಲಲಿಲ್ಲ. ಆಗತಾನೇ ಹೊಸದಾಗಿ ನಿರ್ಮಾಣವಾದ ಮಂಗಳೂರು ರೇಂಜಿನ ಸಬ್ ಎಸಿಸ್ಟಾಂಟ್ ಶಾಲಾ ಇನ್ಸ್‌ಪೆಕ್ಟರರಾಗಿ ನೇಮಕಗೊಂಡರು. ಈ ಮಧ್ಯೆ ಅಂದರೆ ಸರಕಾರಿ ಕೊಲೇಜಿನಲ್ಲಿರುವಾಗ ಅವರ ಅಸಾಧಾರಣ ಅಭಿನಯ ಸಾಮರ್ಥ್ಯಕ್ಕೊಂದು ಅವಕಾಶ ದೊರಕಿತು. ಮದರಾಸಿನ ಗವರ್ನರ್ ಲಾರ್ಡ್ ವೆನ್‌ಲಾಕ್ ಮಂಗಳೂರಿಗೆ ಸಂದರ್ಶನವಿತ್ತಾಗ ಕುಂದಾಪುರ ಕೃಷ್ಣರಾಯರು ಇಂಗ್ಲೀಷಿನಲ್ಲಿ ರಚಿಸಿದ ಚಂದ್ರಹಾಸ ನಾಟಕವನ್ನು ಮಂಗಳೂರಿನ ಕೆಲವು ಸಾರಸ್ವತ ಮಹನೀಯರು ಅಭಿನಯಿಸಿದಾಗ ದುಷ್ಟ ಬುದ್ಧಿಯ ಪಾತ್ರವನ್ನು ಮನೋಜ್ಞವಾಗಿ ಅಭಿನಯಿಸಿದವರು ಪಂಜೆಯವರು. ಅಭಿನಯ ಕೌಶಲವು ವರದಾಚಾರ್ಯರನ್ನು ನೆನಪಿಗೆ ತರುತ್ತಿತ್ತೆಂದು ಬೈಂದೂರು ಆನಂದರಾಯರು ಹೇಳಿದ್ದಾರೆ. ದಿ। ಗೋವಿಂದ ಪೈ ಮುಂತಾದವರೂ ತುಂಬಾ ಮೆಚ್ಚಿಕೊಂಡಿದ್ದರು. ಆದರೆ ಪಂಜೆಯವರಿಗೆ ಮುಂದಿನ ದಿನಗಳಲ್ಲಿ ನಾಟಕಗಳಲ್ಲಿ ಭಾಗವಹಿಸುದ ಅವಕಾಶ ದೊರಕದೆ ಕಲಾಪ್ರೇಮಿಗಳು ಪಂಜೆಯವರ ರಸದೌತಣದಿಂದ ವಂಚಿತ ರಾದರು. ಆದರೆ ಅವರ ನಟನಾಕೌಶಲವು ಪಾಠಗಳಲ್ಲಿ. ಕವನಗಳನ್ನು ವಾಚಿಸಿದಾಗ ಪೂರ್ಣವಾಗಿ ವ್ಯಕ್ತವಾಗುತ್ತಿತ್ತು. ಅದನ್ನು ಕಂಡವರು ಸದಾ ನೆನಪಿನಲ್ಲಿರಿಸುತ್ತಿದ್ದರಂತೆ,

ಸರಕಾರಿ ಕೊಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದಾಗಲೇ ಅಂದರೆ 1900ರಲ್ಲಿ ಪಂಜೆಯವರ ಸಾಹಿತ್ಯ ಶಕ್ತಿ, ಅಭಿರುಚಿ

ಗಳು ಪ್ರಕಟವಾಗುವ ಅವಕಾಶವೊಂದು ಒದಗಿ ಬಂತು. ದಕ್ಷಿಣ ಕನ್ನಡ ಜಿಲ್ಲೆಯು ಹೊಸಯುಗಕ್ಕೆ ಬೇಗನೆ ಕಾಲಿರಿಸುವುದಕ್ಕೆ ಕಾರಣ ಪುರುಷರಲ್ಲೊಬ್ಬರಾದ ಬೋಳಾರ ವಿಠಲರಾಯರು* ಮಂಗಳೂರಲ್ಲಿ ಸುವಾಸಿನಿಯೆಂಬ ಮಾಸಿಕವನ್ನು ಆರಂಭಿಸಿದರು. ಆ ಪತ್ರಿಕೆಗೆ ಸತ್ವ, ಬೆಡಗುಗಳನ್ನು ಒದಗಿಸಿ ಉತ್ಕೃಷ್ಟವಾಗುವಂತೆ ರೂಪಿಸಿದವರು ನಮ್ಮ ಪಂಜೆಯವರು. ಹೆಸರಿಗೇನೋ ಎಂ. ಎ. ಬಿ. ಎಲ್, ಪಾಸಾದ ಬೆನಗಲ್ ರಾಮರಾಯರು ಪತ್ರಿಕೆಯ ಸಂಪಾದಕರು, ಕಾರ್ಯವೆಲ್ಲ ಮುಖ್ಯವಾಗಿ ಪಂಜೆಯವರದ್ದು. ಭಾವನೆಂಟರೀರ್ವರ ಸದಭಿರುಚಿಯ ಫಲವಾಗಿ ಸುವಾಸಿನಿಯು ತನ್ನ ಕಂಪನ್ನು ನಾಡಿನ ಉದ್ದಗಲಗಳಲ್ಲಿ ಪಸರಿಸಿದಳು. ಮತ್ತೆ ಖ್ಯಾತವಾದ 'ಪ್ರಬುದ್ಧ ಕರ್ನಾಟಕ', 'ಜಯ ಕರ್ನಾಟಕ'ಗಳು ಹುಟ್ಟುವ ಮೊದಲು 1900ರಿಂದ 1903ರ ತನಕ ಸರ್ವಾಂಗ ಸುಂದರ, ವಿದ್ವತ್ಪೂರ್ಣವಾದ ಪತ್ರಿಕೆಯನ್ನು ನಡೆಸಿದ ಕೀರ್ತಿಯಲ್ಲಿ ಪಂಜೆಯವರಿಗೆ ಸಿಂಹಪಾಲು. ವರಕವಿ ಮುದ್ದಣನು 'ಚಕ್ರಧಾರಿ'ಯೆಂಬ ಮರೆ ಹೆಸರಲ್ಲಿ ಕಳುಹಿಸಿದ 'ಜೋ ಜೋ' ಎಂಬ ಲೇಖವನ್ನು ಈ ಪತ್ರಿಕೆ ಪ್ರಕಟಿಸಿತ್ತು.

ಪಂಜೆಯವರ ಸೃಷ್ಟಿಯಾದ ಕನ್ನಡದ ಪ್ರಪ್ರಥಮ ಸ್ವತಂತ್ರ ಸಣ್ಣಕತೆಯು ಸುವಾಸಿನಿಯಲ್ಲೇ ಮೂಡಿಬಂದದ್ದು. 'ನನ್ನ ಚಿಕ್ಕತಾಯಿ'ಯು ಆ ಕತೆಯಾಗಿದೆ. 1900ರಲ್ಲಿ ಪ್ರಕಟವಾಗಿದ್ದರೂ ಇಂದೂ ಓದುವಂತಿದೆ. ಸರಸ ಹಾಗೂ ತಿಳಿಯಾದ ಶೈಲಿ ಮತ್ತು ವಿನೋದ ಭಾವದಿಂದ ರಂಜಿಸು

---

*ಇವರೇ ಜಿಲ್ಲೆಯ ಖ್ಯಾತ ಮೋಟಾರು ಸಾಗಾಟದ ಸಂಸ್ಥೆಯಾದ ಸಿ.ಪಿ.ಸಿ ಸಂಸ್ಥೆಯನ್ನೂ, ಪ್ರಸಿದ್ಧ ಪೊಪ್ಯುಲರ್ ವಿಮಾ ಕಂಪೆನಿಯನ್ನು ಸ್ಥಾಪಿಸಿ ಬೆಳೆಸಿದವರು. ಉಜ್ವಲವಾಗಿದ್ದ ಕಂಠೀರವನೂ ಇವರ ಕೂಸು.

ವಂತಹದ್ದು. ಇದನ್ನು ಹಿಂಬಾಲಿಸಿ ಪಂಜೆಯವರ ಲೇಖನಿಯಿಂದ ನನ್ನ ಚಿಕ್ಕತಂದೆ (1902), ನನ್ನ ಚಿಕ್ಕತಂದೆಯ ಉಯಿಲು (1903), ಕಮಲಪುರದ ಹೋಟ್ಲಿನಲ್ಲಿ (1902-3), ನನ್ನ ಹೆಂಡತಿ (1903), ಭಾರತ ಶ್ರವಣ (1902), ವೈದ್ಯರ ಒಗ್ಗರಣೆ (1902-3) ಮುಂತಾದ ಕತೆಗಳು ಸುವಾಸಿನಿಯಲ್ಲೇ ಪ್ರಕಟವಾದವು. ವಿನೋದ, ಸಹಜತೆಗಳು ಈ ಕತೆಗಳ ಮುಖ್ಯ ಗುಣಗಳಾಗಿವೆ.

ಪಂಜೆಯವರ ರಚನೆಗಳಾದ ಐತಿಹಾಸಿಕ ಕತೆಗಳೂ ಇದೇ ಕಾಲದಲ್ಲಿ ಸುವಾಸಿನಿಯಲ್ಲೇ ಬೆಳಗಿದವುಗಳು. 'ದುರ್ಗಾವತಿ', 'ವೀರಮತೆ. 'ಶೈಲಿನಿ' ಮತ್ತು 'ಪ್ರಥುಲಾ' ಆಂದಿನ ವಾಚಕರಿಗೆ ಹೆಚ್ಚಿನ ಸಂತೋಷವನ್ನು ಕೊಟ್ಟಿರಬೇಕು. ಆರಂಭದ ಎರಡು ಕತೆಗಳು ಸಾಮಾನ್ಯಗಾತ್ರದ್ದಾದರೆ ಕೊನೆಯವು ಸಾಕಷ್ಟು ದೀರ್ಘವಾಗಿವೆ. ಪ್ರಥುಲಾ' ಕನ್ನಡ ಕತೆಗಳ ಮೊದಲ ಬಂತಿಯಲ್ಲಿ ಬಾಳತಕ್ಕದೆಂದು ದಿ। ಗೋವಿಂದ ಪೈಯವರು ಅಭಿಪ್ರಾಯಿಸಿದ್ದಾರೆ. ಅದರಲ್ಲಿದ್ದ 'ಸಾರಿ ಹೇಳುವೆ ನಾನು' ಎಂಬ ಹಾಡು ಎದೆ ಕರಗಿಸುವಂತಹದ್ದಂತೆ. ಭಾರತೀಯ ರಮಣಿಯರು ಧೀರೆಯರೂ, ತ್ಯಾಗ ಶೀಲೆಯರೂ ಆಗಿದ್ದರೆಂಬ ವಿಚಾರಗಳನ್ನು ಒಳಗೊಂಡ ಕತೆಗಳಿವು. ಕಥಾವಸ್ತುವಿನ ಸಮರ್ಥವಾದ ನಿರೂಪಣೆಗೆ ಬೇಕಾದ ಉಜ್ವಲ ಶೈಲಿಯೂ ಈ ಕತೆಗಳಲ್ಲಿದೆ. ಪ್ರಥುಲೆಯ ಹೊರತಾದ ಕತೆಗಳು ಸಂಕಲನಗೊಂಡು 1956ರ ತನಕ ಎಂಟು ಮುದ್ರಣಗಳನ್ನು ಕಂಡಿದೆ.

ಈ ಶತಮಾನದ ಮೊದಲಿನ ದಶಕದಲ್ಲಿ ಸರಳವೂ, ನೇರವೂ ಆದ ಗದ್ಯ ಶೈಲಿಯನ್ನು ಸಿದ್ಧಗೊಳಿಸಿದ ಪಂಜೆ

ಯವರನ್ನು ನಾವು ಕೊಂಡಾಡಲೇ ಬೇಕು. ಅಂದಿನ ದಿನಗಳಲ್ಲಿ ಮೈಸೂರು ಪ್ರದೇಶದ ಕನ್ನಡ ಬರವಣಿಗೆ ಸಂಸ್ಕೃತಭೂಯಿಷ್ಠ ವಾಗಿದ್ದು, ಕೃತಕವಾಗಿತ್ತು. ಜನರ ನುಡಿಯಿಂದ ತುಂಬಾ ದೂರವಿದ್ದ ಪಂಡಿತಭಾಷೆಯಾಗಿತ್ತು. ಉತ್ತರ ಕರ್ನಾಟಕದ ಭಾಷೆಯಲ್ಲಿ ಮರಾಠಿಯ ಪ್ರಭಾವವಿತ್ತು. ಬಂಗಾಲಿಯ ಕಾದಂಬರಿಗಳ ಅನುವಾದಗಳಿಂದಾಗಿ ಆಲಂಕಾರಿಕ ಭಾಷೆಯೂ ಕನ್ನಡ ಶೈಲಿಯ ಮೇಲೆ ತುಂಬಾ ಪ್ರಭಾವವನ್ನು ಬೀರಿತ್ತು. ಇಂಗ್ಲಿಷಿನ ಓದಿನಿಂದ ಸರಳತೆ, ಸ್ಪಷ್ಟತೆಗಳು ಮಂಗಳೂರು ಕನ್ನಡದಲ್ಲಿ ಬೇಗನೆ ಬಂತು. ಪಂಜೆಯವರಂತೂ ಆಡುನುಡಿ ಗಳಲ್ಲಿ ಸತ್ವ, ಸೊಗಸುಗಳನ್ನು ಕಂಡುಕೊಂಡು ತಿಳಿಗನ್ನಡದಲ್ಲೇ ಬರೆಯಬೇಕೆಂಬ ವ್ರತ ತೊಟ್ಟವರಾಗಿದ್ದರು. 'ನಮ್ಮಲ್ಲಿಗೆ ಇಂದು ಭೋಜನಕ್ಕೆ ದಯಮಾಡಿಸಬೇಕು' ಎನ್ನುವುದರ ಬದಲು "ನಮ್ಮಲ್ಲಿಗೆ ಇವತ್ತು ಊಟಕ್ಕೆ ಬರುತ್ತೀರಾ?" ಎಂಬುದೇ ಕಿವಿಗೆ ಇಂಪೆಂದವರು ಪಂಜೆಯವರ ತಿಳಿಗನ್ನಡವೇ ಕರಾವಳಿಯ ಬರಹ ಗಾರರಿಗೆ ಗದ್ಯದ ಮಾದರಿಯಾಯಿತು. 1902ರಲ್ಲೇ ಪಂಜೆ ಯವರ ಭಾಷೆಯು ತಿಳಿಯಾಗಿತ್ತೆಂಬುದನ್ನು ನಾವು ಗಮನಿಸ ಬೇಕು.

ಪಂಜೆಯವರ ಹಲವಾರು ಕವನಗಳು ಸುವಾಸಿನಿಯಲ್ಲೇ ಪ್ರಕಟವಾದವು. 'ಭೀಷ್ಮ ನಿರ್ಯಾಣ', 'ಚಂದ್ರೋದಯ', 'ಲಕ್ಷ್ಮೀಶ ಕವಿ', 'ಕಮಲ', 'ಕಬ್ಬಿಣದ ಬುದ್ಧಿವಾದ', 'ಪರೀಕ್ಷೆ ಯಲ್ಲಿ ಪರಾಜಿತನಾದ ವಿದ್ಯಾರ್ಥಿಯ ಪ್ರಲಾಪ' —ಇವೇ ಅಂದಿನ ಕವನಗಳು. ಓಜಸ್ಸು ತುಂಬಿದ ಹಳೆಗನ್ನಡದ ಪ್ರೌಢಶೈಲಿಯ ಕವನಗಳೇ ಈ ಕಾಲದಲ್ಲಿ ಪಂಜೆಯವರಿಂದ ಸೃಷ್ಟಿಯಾಗುತ್ತಿದ್ದವು.

1903ರಲ್ಲಿ ಸುವಾಸಿನೀ ಪತ್ರಿಕೆಯು ನಿಂತು ಹೋದಾಗ

ಪಂಜೆಯವರ ಸಣ್ಣ ಕತೆಗಳೂ ನಿಂತುಹೋದವು. ಮುಂದೆ ಎಳೆಯರಿಗಾಗಿ ಮಾತ್ರ ಕತೆಗಳನ್ನು ಹೆಣೆದರೇ ಹೊರತು ತಾನು ಆರಂಭಿಸಿ ತೋರಿಸಿದ ಕೃಷಿಯನ್ನು ಮುಂದುವರಿಸಲಿಲ್ಲ. 'ತಾವು ತೊಡಗಿದ ಜೇನಹುಟ್ಟನ್ನು ಕಟ್ಟಿದಷ್ಟಕ್ಕೆ ಬಿಟ್ಟುಕೊಟ್ಟರು'. ಉತ್ತಮ ಸಣ್ಣ ಕತೆಗಾರನ ಕಲಾಸೃಷ್ಟಿಯನ್ನು ನಾಡು ಪಡೆಯಲಾರದೆ ಹೋಯಿತು.

ಮುದ್ರಣ ಮತ್ತು ಪ್ರಕಾಶನಗಳ ಮೂಲಕ ಕನ್ನಡ ನುಡಿಯ ಅಮೋಘವಾದ ಸೇವೆಯನ್ನು ಮಾಡಿ ನವೋದಯವನ್ನು ತಂದ ಬಾಸೆಲ್ ಮಿಶನ್ ಸಂಸ್ಥೆಯೊಂದಿಗೆ ಪಂಜೆಯವರ ನಿಕಟ ಸಂಪರ್ಕವಾದುದು ನಮ್ಮ ಸುದೈವ. ಆ ಸಂಸ್ಥೆಗೆ ಇಂಗ್ಲಿಷ್ ಕನ್ನಡ ಚೆನ್ನಾಗಿ ಬಲ್ಲ ಪಂಡಿತರ ನೆರವು ಬೇಕಾಗಿತ್ತು. ಅದಕ್ಕೆ ಸರಿಯಾಗಿ ಪಂಜೆಯವರು ದೊರೆತರು. ಕಡಿಮೆ ವರಮಾನದಲ್ಲಿ ದೊಡ್ಡ ಸಂಸಾರವನ್ನು ನಡೆಸುತ್ತಿದ್ದ ಅವರಿಗೆ ಈ ಹೊಸ ಉಪವೃತ್ತಿಯು ವರವಾಗಿ ಕಂಡಿರಬೇಕು. ಮೇಲಾಗಿ ನುಡಿಯ ಸೇವೆಯಿಂದ ದೊರಕುವ ತೃಪ್ತಿ; ಜರ್ಮನ್ ಅಧಿಕಾರಿಗಳಿಗೆ ಕನ್ನಡ ಕಲಿಸುವ ಅವಕಾಶ. ಇವರಿಂದ ಮಿಶನ್ ಅಧಿಕಾರಿಗೆ ಕನ್ನಡ ಭಾಷೆ ಸಂಸ್ಕೃತಿಗಳ ಪರಿಜ್ಞಾನವಾದಂತೆಯೇ ಅವರಿಂದ ಪಂಜೆಯವರಿಗೆ ನವೀನ ಶಿಕ್ಷಣ ಮಾರ್ಗಗಳ ಕಿಂಡರ್‌ಗಾರ್ಟನ್ ಪದ್ಧತಿ ಮುಂತಾದ ಪ್ರಯೋಗಗಳ ಪರಿಚಯವಾಯಿತು. ಆ ಕಾಲದಲ್ಲಿ ಬಾಸೆಲ್ ಮಿಶನ್ ಸಂಸ್ಥೆಯಿಂದಾಗಿ ಈ ಜಿಲ್ಲೆಯ ಶಾಲೆಗಳಲ್ಲಿ ಅತ್ಯುತ್ತಮ ಶಿಕ್ಷಣೋಪಕರಣಗಳು ಇರುತ್ತಿದ್ದವು. ಸುಂದರವಾದ ಚಿತ್ರಗಳು, ನಕ್ಷೆಗಳು, ಪ್ಲಾಸ್ಟರ್ ಆಫ್ ಪ್ಯಾರಿಸಿನ ಮೊಡೆಲ್‌ಗಳು ಜರ್ಮನ್, ಸ್ವಿಜರ್‌ಲಾಂಡಿನಲ್ಲಿ ಸಿದ್ಧವಾಗಿ ನಮ್ಮ ಶಾಲೆಗಳಿಗೆ ಪೂರೈಕೆಯಾಗುತ್ತಿದ್ದವು, ಭಾರತದಲ್ಲೇ ಇಂತಹ ಅನು

ಕೊಲತೆಗಳನ್ನು ಪಡೆದ ಜಿಲ್ಲೆಗಳು ಆ ದಿನಗಳಲ್ಲಿ ಅತೀ ವಿರಳ ವಾಗಿರಬೇಕು. ಇಂದು ಜಿಲ್ಲೆಯು ಉತ್ತಮ ಫಲಿತಾಂಶ ಕೊಡುವುದರ ಒಂದು ಕಾರಣ ಆ ಸವಲತ್ತನ್ನು ಉಪಯೋಗಿಸಿ ವಿದ್ಯೆಯನ್ನು ಪಡೆದವರು ಇನ್ನೂ ಅಧ್ಯಾಪಕರಾಗಿರುವುದೂ ಆಗಿರಬೇಕು. ಹೊಸ ಪದ್ಧತಿ ಮತ್ತು ಶಿಕ್ಷಣೋಪಕರಣಗಳ ಪರಿ ಜ್ಞಾನವನ್ನು ಗಳಿಸುತ್ತಿದ್ದ ಪಂಜೆಯವರು ನಮ್ಮ ವಿದ್ಯಾಕ್ಷೇತ್ರ ದಲ್ಲಿ ಮೌನಕ್ರಾಂತಿಯನ್ನು ಮಾಡಲು ಪೂರ್ವಸಿದ್ಧತೆಯನ್ನು ಈ ಕಾಲದಲ್ಲಿ ಮಾಡುತ್ತಿದ್ದಿರಬೇಕೆಂದು ನಮಗನಿಸುತ್ತದೆ.

ಬಾಸೆಲ್‌ಮಿಶನ್ ಪತ್ರಿಕೆಯಾದ ಸತ್ಯದೀಪಿಕೆಯು ಪಂಜೆ ಯವರ ಲೇಖನಿಗೆ ಅವಕಾಶವನ್ನು ಕಲ್ಪಿಸಿತು. 'ಎಸ್ಸೆ' ಲಘು ಪ್ರಬಂಧ (Light essays) ಪದ್ಧತಿಯನ್ನು ಕನ್ನಡನುಡಿಯಲ್ಲಿ ಆರಂಭಿಸಿದ ಕೀರ್ತಿಯು ಇವರದ್ದೇ. ನಿತ್ಯದ ಆಗುಹೋಗುಗಳ ಬಗ್ಗೆ ಸರಸ, ಸುರಸ ಮತ್ತು ಆತ್ಮೀಯವಾದ ಶೈಲಿಯಲ್ಲಿ ಬರೆದ ಹರಟೆಗಳು 6–7 ದಶಕಗಳ ಬಳಿಕವೂ ಓದಿ ಸವಿಯುವಂತಿದೆ. ತಮ್ಮನ್ನು 'ಹರಟೆಮಲ್ಲ'ರೆಂದು ಕರೆಸಿಕೊಂಡು ಆ ಕಾಲಕ್ಕೆ ಪ್ರಸ್ತುತವಾದ ವಿಷಯಗಳ ಕುರಿತಾಗಿ ಬರೆದ ಮೊದಲೆಯ ನಗೆಯ ಬರಹಗಳು ಕೆಲವರನ್ನು ರೇಗಿಸಿಯೂ ಇತ್ತು. ಕರ್ತವ್ಯ ಭ್ರಷ್ಟರಾದ ಮಂಗಳೂರಿನ ಆಧ್ಯರು ಎಚ್ಚರಿಕೆಯಿಂದ ಸಾರ್ವಜನಿಕ ವ್ಯವಹಾರಗಳನ್ನು ನಡೆಸಬೇಕಾಯಿತು. ಕುದುರೆ ಸಾರೋಟುಗಳ ಮೂಲಕ ಯಾನ ಏರ್ಪಡಿಸುತ್ತಿದ್ದ (Stage Coach) ಮಹನೀಯರು ಹರಟೆಮಲ್ಲನ ಮೊದಲೆಯಿಂದ ಕೆರಳಿದರು.

ಸತ್ಯದೀಪಿಕೆಯಲ್ಲಿ ಪಂಜೆಯವರು ಅನೇಕ ಹರಟೆಗಳನ್ನು ಬರೆದಿದ್ದಾರೆ* 'ಇಂದಿಗೆ 40 ವರ್ಷಗಳ ಹಿಂದೆಯಾದರೆ

---

* ಇವುಗಳಲ್ಲಿ ಕೆಲವನ್ನು ಶ್ರೀ ಶಿವರಾಮ ಕಾರಂತರು ಸಂಪಾದಿಸಿದ 'ಪಂಜೆಯವರ ನೆನಪಿಗಾಗಿ' ಗ್ರಂಥದಲ್ಲಿ ಕಾಣಬಹುದು.

ಅವುಗಳಂಥಾ ಪ್ರಬಂಧಗಳು ನಮ್ಮ ಜಿಲ್ಲೆಯಲ್ಲಿ ಅಲ್ಲ, ಕನ್ನಡ ನಾಡಿನಲ್ಲಿ ಬೇರೆ ಹುಟ್ಟಿರಲಿಲ್ಲ.' 1952ರ ಸುಮಾರಿನಲ್ಲಿ ಗೋವಿಂದ ಪೈಯವರು ಹೇಳಿದ ಮಾತಿದು. 'ಹಲ್ಲಿ', ‹ಬಂದಣಿಗೆ› ಮುಂತಾದ ಶ್ರೇಷ್ಠ, ಎಸ್ಸೆಗಳ ಸೊಗಸನ್ನೇ ಪೈಯವರು ವಿಶೇಷವಾಗಿ ಸ್ತುತಿಸಿದ್ದಾರೆ. ಪಂಜೆಯವರನ್ನು ಕನ್ನಡದ ಎಡಿಸನ್ ಯಾ ಸ್ಟೀಲ್ (ಖ್ಯಾತ ಆಂಗ್ಲ ಎಸ್ಸೆಕಾರರು) ಎಂದು ಕರೆಯಬಹುದು. ಅವರು ಸತ್ಯದೀಪಿಕೆಯಲ್ಲಿ ಬರೆಯು ತ್ತಿದ್ದುದು ‹ಹರಟೆಮಲ್ಲ'ನೆಂಬ ಗುಪ್ತನಾಮದಲ್ಲಿ ಮಾತ್ರವಲ್ಲ, ‹ರಾ. ಮ. ಪಂ'. ‹ಸಂ. ಭ್ರಾಂ. ತಂ' ಎಂಬ ಹೆಸರಲ್ಲೂ ಬರೆಯುತ್ತಿದ್ದರು. ಬಳಿಕ 'ಕವಿಶಿಷ್ಯ'ರೆಂಬ ಹೆಸರಲ್ಲೆ ಸಾಹಿತ್ಯ ಸೃಷ್ಟಿ ಮಾಡುತ್ತಿದ್ದರು. ಮುಖ್ಯವಾಗಿ ಕವನಗಳನ್ನು ಕವಿಶಿಷ್ಯ ರಾಗಿ ಪ್ರಕಟಿಸುತ್ತಿದ್ದರು. 'ರಾ. ಮ. ಪಂ' ಅಂಕಿತದಲ್ಲಿ ಚೆಲುವಾದ (ಇಂಗ್ಲಿಷ್ ಕವನಗಳ) ಅನುವಾದಗಳನ್ನು ಸತ್ಯ ದೀಪಿಕೆಯಲ್ಲೇ ಪ್ರಕಟಿಸಿದ್ದುಂಟು. ಮಕ್ಕಳಲ್ಲಿ ಜನಪ್ರಿಯವಾಗಿದ್ದ 'ಮಿನುಗೆಲೆ, ಮಿನುಗೆಲೆ, ನಕ್ಷತ್ರ', 'ಮರಳಿ ನೀ ತಮ್ಮನ ಕರೆಯವ್ವಾ' ಅಂತಹ ಅನುವಾದಗಳು. ಬಿ. ಎಂ. ಶ್ರೀಯವರ 'ಅನುವಾದಗಳು' 20 ವರ್ಷಗಳ ಬಳಿಕ 1925ರಲ್ಲಿ ಪ್ರಕಾಶಿತ ವಾಯಿತು. ಪಂಜೆಯವರಿಂದ ರಚಿತವಾದ ವ್ಯಾಕರಣ ಪುಸ್ತಕ ಗಳನ್ನೂ ಬಾಸೆಲ್ ಮಿಶನ್ 1905ರಲ್ಲಿ ಪ್ರಕಟಿಸಿತು. ಈ ವ್ಯಾಕರಣವೂ ಹೊಸರೀತಿಯದ್ದೆನ್ನಬಹುದು.

ಮಂಗಳೂರು ರೇಂಜಿನ ಸಬ್ ಅಸಿಸ್ಟಾಂಟ್ ಶಾಲಾ ಇನ್ಸ್‌ಪೆಕ್ಟರರಾಗಿ ಪಂಜೆಯವರು ಕಾರ್ಯವನ್ನು ಆರಂಭಿಸುವ ಹೊಸತಿನಲ್ಲೇ ತಮ್ಮ ಸೋದರರಾದ ಶಿವ ಮತ್ತು ರಾಘ ವೇಂದ್ರರನ್ನು ಕಳೆದು ಹೆಚ್ಚಿನ ನೋವಿಗೊಳಗಾದರು. ರಾಘ

ೇಂದ್ರನು ಅವರಿಗೆ ತುಂಬಾ ನಿಕಟವಾಗಿದ್ದ ಬುದ್ಧಿಶಾಲಿ ತಮ್ಮ. ಅವನು '.ತಮ್ಮನಿಗೆ ತಮ್ಮ, ಸಾಕುಮಗುವಿಗೆ ಸಾಕುಮಗು, ಶಿಷ್ಯನಿಗೆ ಶಿಷ್ಯ, ಗೆಳೆಯನಿಗೆ ಗೆಳೆಯನಾಗಿದ್ದ-ಏಕಕಾಲದಲ್ಲಿ ಅವರ ಆದರ್ಶಗಳಾಗಿದ್ದ ಒಳ್ಳೆತನ, ವಿನಯ, ಪ್ರೀತಿ, ಬುದ್ಧಿ ಮತ್ತೆ. ಪರಿಶ್ರಮಾದಿ ಗುಣಗಳನ್ನು ಕೂಡಿದವನಾಗಿದ್ದ ಆತ... ಅವರೊಳಗಿದ್ದ ಹೊಂದಿಕೆಯೆಷ್ಟೆಂದರೆ-ಒಬ್ಬರ ಅಂಗ ಚೇಷ್ಟೆ ಇನ್ನೊಬ್ಬರಿಗೆ ಅರ್ಥವಾಗುತಿತ್ತು. ಒಬ್ಬರ ಹಾವದಿಂದ ಇನ್ನೊಬ್ಬರಿಗೆ ಮನಸ್ಸಿನಲ್ಲಿ ಚಿತ್ರಕಟ್ಟುತಿತ್ತು. ಒಬ್ಬನ ನುಡಿಯಿಂದ ಇನ್ನೊಬ್ಬನಿಗೆ ಕತೆಯೇ ಬಿತ್ತರಿಸುವಂತಿತ್ತು. ಆ ತಮ್ಮ ಅವರಿಗೆ ಧ್ಯೇಯಸಾಧನೆಯಂತಿದ್ದ. ಶಿಷ್ಯವೃತ್ತಿಗೆ ದರ್ಶನ ಕೊಟ್ಟಂತಿದ್ದ. ಆತನ ಬೆಳವಣಿಗೆ, ಪಾಲನೆಗಳಲ್ಲಿ ಅವರು ತೋರಿಸಿದ ಶ್ರಮ ಅಷ್ಟಿಷ್ಟಲ್ಲ. ತನಗಾದ ಸಂಕಟ, ತನ್ನ ಹಂಗಿನ ಬಾಳು ಎಂದೆಂದೂ ಅವನಿಗೆ ಬರಬಾರದೆಂದು ದುಡಿದವರು ಅವರು. ಆದರೆ, ಆ ಆಸೆ ಕೈಗೂಡುತ್ತ ಬಂದಾಗ, ಅವರ ಸವಿಗನಸು ನಿಜವಾದೀತೆಂದು ಅನಿಸಿದಾಗ, ಆಗಲೇ ಆತ-ಆ ಸೋದರ ದೂರವಾದ*"

1907ರಲ್ಲಿ ಪಂಜೆಯವರಿಗೆ ತಾನಿದ್ದ ಹುದ್ದೆಯಲ್ಲೇ ಕಾಸರಗೋಡಿಗೆ ವರ್ಗವಾಯಿತು. ಅಲ್ಲಿ ಅವರು ಕಳೆದ ಎಂಟು ವರ್ಷಗಳು ತುಂಬಾ ಆನಂದದ ದಿನಗಳಂತೆ. ಕಾಸರಗೋಡು ರೈಲ್ವೆಸ್ಟೇಶನ್ ಬಳಿಯಲ್ಲಿ ವಿಶಾಲವಾದ ತೋಟವಿದ್ದ ದೊಡ್ಡ ಮನೆಯಲ್ಲಿ ವಾಸ, ಸುಖ ಸಂಸಾರ, ಮನಸ್ಸಿನ ಇಂಗಿತವನ್ನರಿತು ಕಾರ್ಯೋತ್ಸಾಹದಿಂದ ದುಡಿಯುವ ಪೇದೆ ರಾಮ ನಾಯಕ ಮತ್ತು ಖಾಸಗಿ ನೌಕರನಾದ ಬಾಬು ಪೈ. ವಿದ್ಯಾ

* ಪಂಜೆರಾಮರಾಯರು, ಪಂಜೆಯವರ ನೆನಪಿಗಾಗಿ ಪು ೭೨

ಕ್ಷೇತ್ರದಲ್ಲೂ, ಜಾನಪದ ಸಂಸ್ಕೃತಿಯ ವಿವಿಧ ಅಂಗಗಳ ಪರಿಚಯ ಬೆಳೆಸುವುದರಲ್ಲಿ ತುಂಬಾ ಕ್ರಿಯಾಶೀಲರಾಗಿ ದುಡಿಮೆಯಲ್ಲಿ ಸಂತೃಪ್ತಿ ಪಡೆದ ದಿನಗಳು. ಮಂಗಳೂರ ರೀತಿಯಲ್ಲಿ ಕಿರುಕುಳಕೊಡುವ ಪ್ರತಿಷ್ಠಿತರಿಲ್ಲದ ಊರು ಇನ್ಸ್ಪೆಕ್ಟರರೆಂದರೆ ಭೀತಿಪಡುತ್ತಿದ್ದ ಅಧ್ಯಾಪಕರು ಪ್ರೀತಿ ತೋರಿಸುವಂತೆ ಬದಲಾವಣೆಯು ಪಂಜೆಯವರ ಸವಿಯಾದ ವ್ಯಕ್ತಿತ್ವದಿಂದ ಸಾಧ್ಯವಾಯಿತು. ಇನ್ಸ್ಪೆಕ್ಷನ್ ಅಂದರೆ ಹುಳುಕುಗಳನ್ನು ಎತ್ತಿ ಹಿಡಿದು ಗದರಿಸಿ ಕೆಟ್ಟ ರಿಮಾರ್ಕುಗಳನ್ನು ಬರೆಯುವ ಕಾಯಕವಾಗಿದ್ದಲ್ಲಿ ಪಂಜೆಯವರು ತಾವೇ ಪಾಠ ಹೇಳಿ ಅಧ್ಯಾಪಕರನ್ನು ತಿದ್ದಹತ್ತಿದರು. ಬಡ ಅಧ್ಯಾಪಕರ ಕಷ್ಟ, ಮಿತಿಗಳನ್ನು ಸಹಾನುಭೂತಿಯಿಂದ ಅರಿತು, ಹಳ್ಳಿ ಸಾಲೆಗಳ ಕೊರತೆಗಳನ್ನು ಲಕ್ಷಿಸಿ ಹೊಸರೀತಿಯ ಪಾಠ ಹೇಳುವ ಕ್ರಮವನ್ನು ರೂಢಿಯಲ್ಲಿ ತಂದವರು ಪಂಜೆಯವರು. ಐಗಳ ಪಾಠಶಾಲೆಯ ಕೊಠಡೆ ಪೆಟ್ಟುಗಳು ತಪ್ಪಿ ಎಳೆಯ ವಿದ್ಯಾರ್ಥಿಗಳ ವ್ಯಕ್ತಿತ್ವಕ್ಕೆ ಗೌರವವನ್ನೀಯುವ ವಿವೇಕದ ಮಾರ್ಗವು ನಿರ್ಮಾಣವಾಯಿತು. ಅಧ್ಯಾಪಕರಲ್ಲಿ ನಮ್ಮ ಸಂಸ್ಕೃತಿ, ಸಾಹಿತ್ಯ, ಸೊಗಸುಗಳ ಬಗ್ಗೆ ಅಭಿರುಚಿಯನ್ನುಂಟು ಮಾಡಿ ಆ ಅಭಿರುಚಿಯು ಬೆಳೆಯುವಂತೆ ಮಾಡಿದರು. ‘ತಾವೇ ಮಾದರಿಯಾಗಿ ನಿಂತು-ಬಡ ಉಪಾಧ್ಯಾಯರ ಪಾಲಿನ ಜೀವನ ಸೌಂದರ್ಯವು ಹೆಚ್ಚುವಂತೆ, ಮಾನಸಿಕ ಸುಖ, ವಿಚಾರಗಳಲ್ಲಿ ಆಸಕ್ತಿ ಹುಟ್ಟುವಂತೆ, ಸುತ್ತಲಿನ ಚೆಲುವಿಗೆ ಅವರ ಕಣ್ಣು ತೆರೆಯುವಂತೆ-ದಾರಿ ತೋರಿಸಿ ಕೊಟ್ಟರು’. ‘ನೀನು’ ಎಂದು ಸಂಬೋಧಿಸಲ್ಪಡುತ್ತಿದ್ದ ಉಪಾಧ್ಯಾಯರನ್ನು ‘ನೀವು’ ಎಂದು ಕರೆದವರು ಪಂಜೆಯವರು. ಮಕ್ಕಳ ಒಡನಾಟದಲ್ಲಿ ಸವಿಯಿದೆ, ಸುಖವಿದೆ,

ಹೊಸದಾರಿಯಲ್ಲಿ ಚೆಲುವಿದೆ. ಮಕ್ಕಳ ಬದುಕು ಲಘುವಾಗುತ್ತದೆ, ಜ್ಞಾನದ ಹಸಿವು ಬೆಳೆಯುತ್ತದೆ. ಶಾಲೆಯ ಕೆಲಸ ಕಾಮಗಾರಿಯಲ್ಲ, ಸವಿಯೂಟ-ಎಂದೆಲ್ಲಾ ತೋರಿಸಿಕೊಟ್ಟರು. ಅಕ್ಷರಮಾಲೆಯು ಕಾಡುವ ಬೇತಾಳವಾಗುವುದು ನಿಂತಿತು. ಅಂಕೆ ಅಂಕಗಣಿತಗಳು ಜೀವ ತಿನ್ನುವ ಬೇನೆಯಾಗುವುದು ನಿಂತಿತು. ಬದಲು ಮಗುವನ್ನು ನಗಿಸುವ, ಮಗುವಿನಲ್ಲಿ ಉತ್ಸಾಹ ಆಸಕ್ತಿ ಹುಟ್ಟಿಸುವ ಕೆಲಸವಾಗತೊಡಗಿತು" * ಅದೂ ಆ ತನಕ ಪ್ರಚಲಿತವಾಗಿದ್ದ ಐಗಳ ಪಠ್ಯಪುಸ್ತಕಗಳಿಗೆ ನಿವೃತ್ತಿಯಾಗಿ ಮಕ್ಕಳ ಮನಸ್ಸು ಹಿಗ್ಗುವ, ಬೆಳೆಯುವ ಶಿಕ್ಷೆಗಳನ್ನು ಪಂಜೆಯವರೇ ರೂಪಿಸಿದರು. ಇದರ ಕೀರ್ತಿಯೂ ಪಂಜೆಯವರದ್ದೇ ಆಗಿದೆ. ಮ್ಯಾಕಮಿಲನ ಕಂಪೆನಿಯವರು ಎಸ್. ಜಿ. ನರಸಿಂಹಾಚಾರರ ಪಠ್ಯಪುಸ್ತಕದ ಬದಲಾಗಿ ಮಾರ್ಸಡೆನರ ಕನ್ನಡ ಪಠ್ಯಗಳನ್ನು ಪ್ರಕಟಿಸಿದಾಗ ಪಂಜೆಯವರು ಸಂಪಾದಿಸಿದ ಪುಸ್ತಕಗಳಿಗೆ ಮಾರ್ಸಡೆನರ ಹೆಸರುಕೊಟ್ಟರು.

ತುಳುನಾಡಿನ ಜಾನಪದ ಸಾಹಿತ್ಯ ಸಂಸ್ಕೃತಿಯತ್ತ ಪಂಜೆಯವರ ಒಲವು ಹರಿದುದು ಇದೇ ಕಾಲದಲ್ಲೇ. ಇನ್ಸ್‌ಪೆಕ್ಷನ್‌ಗಾಗಿ ಹಳ್ಳಿಮೂಲೆಗಳನ್ನು ಸಂದರ್ಶಿಸುವುದಕ್ಕೆ ಅಧಿಕಾರಿಗಳು ಬೇಸರಪಡುವುದು ಸಾಮಾನ್ಯವಾಗಿತ್ತು. ಆದರೆ ಪಂಜೆಯವರಿಗೆ ಹಳ್ಳಿಯ ನಿಸರ್ಗಸೌಂದರ್ಯ, ಓಬೇಲೆ ಹಾಡುಗಳು, ಸರಳವೂ ಸುಂದರವೂ ಆದ ಸಾಂಪ್ರದಾಯಿಕ ಜೀವನ ಕ್ರಮಗಳು; ಊರ ಹೆಸರುಗಳು, ಐತಿಹ್ಯಗಳು ಆನಂದೋತ್ಸಾಹಗಳನ್ನು ಒದಗಿಸುತ್ತಿತ್ತು. ಸುಶಿಕ್ಷಿತರೆಂದೆನಿಸಿಕೊಳ್ಳುವವರು ಯಾರೂ ಪಂಜೆಯವರಂತೆ ಈ ಜಿಲ್ಲೆಯ ಜೀವನದ ಸೊಗಸನ್ನು ಅರಿತಿರಲಿಲ್ಲ, ಮೆಚ್ಚಿರಲಿಲ್ಲ. ಅವರಿಗೆಲ್ಲಾ ಹಳ್ಳಿಗರು ಕೊಳಕರು, ಒಡ್ಡ

*ಪಂಜೆ ರಾಮ ರಾಯರು ಪಂಜೆಯವರ ನೆನಪಿಗಾಗಿ ಪು. ೭೫

ರಾಗಿದ್ದರು. ಜಾನಪದ ಹಾಡುಗಳ ಮತ್ತು ಅಜ್ಜಿಕತೆಗಳ ಸಂಗ್ರಹ ಕಾರ್ಯದಲ್ಲಿ ಅನೇಕ ಅಧ್ಯಾಪಕರು ಪಂಜೆಯವರಿಗೆ ನೆರವಾಗಿದ್ದರು. ಅವರ ಪೇದೆಯಾದ ರಾಮನಾಯಕನ ಉತ್ಸಾಹ, ಸೇವೆಗಳು ಹಿರಿದಾಗಿದ್ದವಂತೆ. ಹಲವಾರು ವರ್ಷಗಳ ಬಳಿಕ ಪಂಜೆಯವರು ಪ್ರಕಟಿಸಿದ 'ಕೋಟಿ ಚೆನ್ನಯ' ವೆಂಬ ಕನ್ನಡ ಕೃತಿಯು ತುಳು ಪಾಡ್ದನವನ್ನು ಆಧರಿಸಿದ ಗದ್ಯ ನಿರೂಪಣೆ. ತುಳವರ ಕ್ಷಾತ್ರ, ತ್ಯಾಗ, ವಾತ್ಸಲ್ಯ ಹಾಗೂ ಬಾಳಿನ ಮೌಲ್ಯಗಳನ್ನು ತಿಳಿಸುವ ಈ ರಸಪಾಕವು ಯಾವ ಜನಾಂಗವೂ ಎದೆಯರಳಿಸಿ ಅಭಿಮಾನ ಪಡತಕ್ಕ ವೀರರೀರ್ವರ ಕರುಣಕತೆ. ಪ್ರತಿ ಅಕ್ಷರವೂ ರಸಾವೇಶದಿಂದ ತುಂಬುವಂತೆ ರಚಿಸಲಾದ ಅಚ್ಚುಕಟ್ಟಾದ ಕಲಾಕೃತಿ. ಪಾಡ್ದನಗಳಲ್ಲಿರುವ ತುಂಬಾ ವಿವರಗಳಲ್ಲಿ ಮುಖ್ಯವಾದುವುಗಳನ್ನು, ಬೇಕಾದುದವುಗಳನ್ನು ಆರಿಸಿ ಸಂಯೋಜನೆಗೊಳಿಸಿದ ಪಂಜೆಯವರ ಈ ರಚನೆಗಾಗಿ ಶಾಶ್ವತವಾದ ಸ್ಥಾನವನ್ನು ಅವರು ಪಡೆದಿದ್ದಾರೆ.* ತುಳು ಸಂಸ್ಕೃತಿಯ ಹಾಲನ್ನು ಸೇವಿಸಿ ಬಳೆದವರಾದ ಪಂಜೆಯವರು ತಮ್ಮ 'ಕೋಟಿ ಚೆನ್ನಯ'ದ ಮೂಲಕ ದೊಡ್ಡ ಕಾಣಿಕೆಯನ್ನಿತ್ತು, ತುಳುನಾಡಿಗೆ ಋಣಸಲ್ಲಿಸಿ ಧನ್ಯರಾಗಿದ್ದಾರೆ. ತುಳುನುಡಿಯ

* "ಈ ರೀತಿಯ ಭಾಷೆ ಕನ್ನಡತನದ ನೈಜಸತ್ವವನ್ನು ಮೈಗೂಡಿಕೊಂಡಿರುವದಲ್ಲದೆ, ಪರಂಪರಾಗತವಾದ ಶ್ರೀಮಂತಿಕೆಯಿಂದಲೂ ತುಂಬಿ, ಓಜಃ ಪೂರ್ಣವಾಗಿದೆ. 'ಕೋಟಿ ಚೆನ್ನಯ'ದ ವಸ್ತು ಐತಿಹಾಸಿಕವಾಗಿದೆ; ಮುಖ್ಯವಾಗಿ ಅದು ಒಂದು ಸಾಹಸದ ಕತೆ. ಕಥನ ಶೈಲಿ 'ವೊಡ್ಡಾರಾಧನ'ದ ಕತೆಗಳನ್ನು ನೆನಪಿಗೆ ತರುವಷ್ಟು ಪರಿಪೂರ್ಣವಾಗಿದೆ. ಆದಕ್ಕೂ ಹೆಚ್ಚಾಗಿ ಮಾತು, ಸನ್ನಿವೇಶ, ವಾತಾವರಣಗಳಲ್ಲೆಲ್ಲ ಪಂಜೆಯವರು ಪ್ರಾದೇಶಿಕತೆಯನ್ನು ಹಾಸುಹೊಕ್ಕಾಗಿ ನೆಯ್ದಿದ್ದಾರೆ." ಶ್ರೀ ಕೀರ್ತಿನಾಥ ಕುರ್ತಕೋಟಿ, 'ಯುಗಧರ್ಮ ಮತ್ತು ಸಾಹಿತ್ಯ ದರ್ಶನ', ಪುಟ ೧೪೯.

ಸೊಗಸುಗಳನ್ನು ಮೆಚ್ಚಿ ಕನ್ನಡದಲ್ಲಿ ಅಳವಡಿಸಿದ ಕೊಂಡ ಅವರ ಹೃದಯ ವೈಶಾಲ್ಯ. ಗುಣಗ್ರಾಹಿತ್ವ, ಮುಂತಾದ ಸದ್ಗುಣಗಳನ್ನು ಈ ಜಿಲ್ಲೆ ಎಂದೂ ಮರೆಯದು. ಕೋಟಿ ಚೆನ್ನಯದ ವಿಷಯ ಸಂಗ್ರಹವಾಗಿ ತುಂಬಾ ಸಮಯದ ಬಳಿಕ ಪಂಜೆಯವರಿಂದ ಇನ್ನೊಂದು ಕ್ಷಾತ್ರಭೂಮಿಯಾದ ಕೊಡಗಿನಲ್ಲಿ ಈ ಕಥಾನಕವು ರಚಿತವಾಗಿ 1926ರಲ್ಲಿ ಮುದ್ರಿತವಾಯಿತು. ಮುಗಿಲ ಮೇಲಿನ ರಾಜ್ಯದಲ್ಲಿದ್ದುಕೊಂಡು ಕರೆನಾಡಿನ ಹಿಂದಿನ ಬಾಳಿನಂಶಗಳನ್ನು ಕಲ್ಪಿಸಿ, ಅನುಭವಿಸಿ, ಎಂದೂ ಮಾಸದ ಶಬ್ದಚಿತ್ರಗಳಲ್ಲಿ ತುಂಬುವ ಕಾರ್ಯದಲ್ಲಿ ಪಂಜೆಯವರ ತನ್ಮಯತೆಯನ್ನೇ ನಾವಿಂದು ಊಹಿಸಬೇಕು. 'ಕೋಟಿಚೆನ್ನಯ' ದ ವಾಸ್ತು, ಭಾಷೆ ಮತ್ತು ನಿರೂಪಣೆ ಅಂತೆಯೆ ತುಳುನಾಡಿನ ವಾತಾವರಣ–ಇವನ್ನು ಮೀರಿಸಲು ಯಾರಿಂದಲೂ ಸಾಧ್ಯವಾಗ ದೆಂಬಂತೆ ರಚಿತವಾದ ಕೃತಿಯಿದು. ಇಷ್ಟು ಸೊಗಸಾಗಿ, ಸಮರ್ಥವಾಗಿ ಹೇಳಿದ ಕಥಾನಕಗಳು ಯಾವ ಭಾಷೆಯಲ್ಲೂ ಎಷ್ಟಿವೆಯೆಂದು ಕೇಳುವಂತಿದೆ. ಕೇವಲ 'ಕೋಟಿ ಚೆನ್ನಯ' ಕ್ಕಾಗಿಯೇ ಪಂಜೆಯವರನ್ನು ನಾವು ಮರೆಯಲಾರೆವು.

ಪಂಜೆಯವರು ಸ್ವಸಂತೋಷಕ್ಕಾಗಿ, ಮಕ್ಕಳ ಆನಂದಕ್ಕಾಗಿ ಹಲವಾರು ಕವನಗಳನ್ನು ರಚಿಸುತ್ತಲೇ ಇದ್ದರು. ಇವುಗಳಲ್ಲಿ ಹಲವನ್ನು ಆರಿಸಿ, ಹಳೆಯ ಹಾಡುಗಳನ್ನು ಸೇರಿಸಿ ಒಂದು ಸಂಕಲವನ್ನು ಪೋಣಿಸಿದರು. 1912ರಲ್ಲಿ ಬಾಸೆಲ್ ಮಿಶನ್ ಪ್ರೆಸ್ಸಿನವರು ಇದನ್ನು 'ಕನ್ನಡ ಮೊದಲನೆಯ ಪದ್ಯ ಪುಸ್ತಕ' ವೆಂದು ಹೆಸರಿಸಿ ಪ್ರಕಾಶಿಸಿದರು. ಈ ಸಂಸ್ಥೆಯೇ 1877ರಲ್ಲಿ ಮೊದಲಬಾರಿಗೆ ಪ್ರಾಚೀನ ಕಾವ್ಯಗಳಿಂದ ಕಾವ್ಯಭಾಗಗಳನ್ನು ಸಂಕಲಿಸಿ 'ಕರ್ನಾಟಕ ಕಾವ್ಯಮಾಲೆ'ಯೆಂದು ಪ್ರಚುರಗೊಳಿಸಿತ್ತು.

ಸಮಕಾಲೀನರ ಕವನಗಳು ಮೊತ್ತಮೊದಲಿಗೆ ಸಂಕಲನವಾದುದು 1912ರಲ್ಲಿ ಪಂಜೆಯವರಿಂದಲೇ ಆದುದಿರಬೇಕು. ಇದರಲ್ಲಿ ಹಳೆಯ ಜೋಗುಳ, ಸರ್ವಜ್ಞ ತ್ರಿಪದಿಗಳು, ಕನಕದಾಸರ ಹಾಡುಗಳಲ್ಲದೆ, ಉಳ್ಳಾಲ ಮಂಗೇಶರಾಯರಿಂದ ಮತ್ತು ಮಂಜೇಶ್ವರ ಅನಂತರಾಯರಿಂದ ರಚಿತವಾದ ಒಂದೊಂದು ಕವನಗಳಿವೆ. ಪಂಜೆಯವರ ಪ್ರಸಿದ್ಧವಾದ 'ನಾಗರ ಹಾವೇ' 'ಹಾವೊಳು ಹೂವೇ', 'ನಕ್ಷತ್ರ', 'ಜೇನುಹುಳ', 'ಎಂಟು ಬೇಡರು' ಮತ್ತು 'ನಾಗಣ್ಣನ ಕನ್ನಡಕ'–ಈ ಕವನಗಳು ಮೊದಲನೆಯ ಪುಸ್ತಕದಲ್ಲಿವೆ. ಎಳೆಯ ಮಕ್ಕಳು ಹಾಡಿ ನಲಿದು ಕಾವ್ಯ ಪ್ರೇಮವನ್ನು ಬೆಳೆಸಬೇಕೆಂಬ ಉದ್ದೇಶವನ್ನು ನಾವಿದರಲ್ಲಿ ಕಾಣಬಹುದು. ಆ ದಿನಗಳಲ್ಲಿ 1936ರ ಒಳಗೆ 13 ಮುದ್ರಣ ಗಳನ್ನು ಕಂಡಿದೆಯೆಂದರೆ ಅದರ ಜನಪ್ರಿಯತೆಯ ಅರಿವಾಗ ಬಹುದು. ಇದನ್ನು ದಿ। ಗೋವಿಂದ ಪೈಯವರು 'ಹೊಸ ಗನ್ನಡ ಕಾವ್ಯದ ಶಿಶುರೂಪ'ವೆಂದಿದ್ದಾರೆ.

ಎರಡನೆಯ ಪದ್ಯಪುಸ್ತಕ (1919) ದಲ್ಲಿ 'ಮೂಡುವನು ರವಿ ಮೂಡುವನು', 'ತಾರಮ್ಮಯ್ಯಾ, ತಂದು ತೋರಮ್ಮಯ್ಯಾ', 'ಬಾಲಸ್ಮರಣೆ', 'ಅಣ್ಣನ ವಿಲಾಪ' ಮುಂತಾದ ಹೊಸರೀತಿಯ ಸರಳವಾದ ಮತ್ತು ಸೊಗಸಾದ ಕವನಗಳಿವೆ. 'ತೆಂಕಣಗಾಳಿ', 'ಕಡೆಕಂಜಿ' ಮತ್ತು 'ಡೊಂಬರ ಚೆನ್ನೆ' ಕವನಗಳೂ ಈ ಸಂಗ್ರಹದ ಬೆಲೆಯನ್ನು ಹೆಚ್ಚಿಸಿವೆ. ಕೆಲಕಾಲದ ಬಳಿಕ ಕನ್ನಡ ಮೂರನೆಯ ಪದ್ಯಪುಸ್ತಕವನ್ನೂ ಪಂಜೆಯವರು ಸಂಪಾದಿಸಿದರು. ಇದರಲ್ಲಿ ಅನ್ಯಕವಿಗಳ ಕವನಗಳೇ ಹೆಚ್ಚಿವೆ. ಇದರಲ್ಲಿ ಇರುವ ಪಂಜೆಯವರ ಒಂದೇ ಒಂದು ಕವನವೆಂದರೆ ವಿಖ್ಯಾತವಾದ 'ಹುತ್ತರಿಹಾಡು'.

ಪಂಜೆಯುವರ ಕಾವ್ಯಪ್ರತಿಬೆ ಮತ್ತು ಹೊಸಗನ್ನಡ ಕಾವ್ಯ ಪರಂಪರೆಗೆ ಅವರು ಕೊಟ್ಟ ಕಾಣಿಕೆಗಳ ಬಗ್ಗೆ ಸ್ಥೂಲವಾದ ವಿವೇಚನೆಯನ್ನು ಇಲ್ಲಿ ಮಾಡಬೇಕಾಗಿದೆ. 'ಪಂಜೆಯುವರು ಈ ಜಿಲ್ಲೆಯ ಮಟ್ಟಿಗೆ ಮಾತ್ರ ಕವಿಗಳು' ಎಂಬ ತಪ್ಪು ಅಭಿಪ್ರಾಯ ವನ್ನು ಒಬ್ಬರು ವ್ಯಕ್ತಪಡಿಸಿದ್ದಾರೆ. ಈ ವಿಮರ್ಶಕರು ಪ್ರಾಯಂಶ: ಪಂಜೆಯುವರ ಕವನಗಳನ್ನು ಓದದೆಯೇ ಯಾ ಪಂಜೆಯುವರು ಕಾವ್ಯ ರಚಿಸುವಾಗಿನ, ಅದರ ಮೊದಲಿನ ಕನ್ನಡ ಕಾವ್ಯ ಪರಿಸ್ಥಿತಿಯನ್ನು ಅರಿತುಕೊಳ್ಳದೆ ಹೇಳಿದ ಅವಸರದ ಮಾತಾಗಿದೆ. 19ನೆಯ ಶತಮಾನದಲ್ಲಿ ಕನ್ನಡ ಕಾವ್ಯವು ಜೀವನ್ಮೃತವಾಗಿತ್ತು. ಅಲ್ಲೊ, ಇಲ್ಲೊ ಘನಪಂಡಿತರು ಷಟ್ಪದಿ. ಕಂದಗಳಲ್ಲಿ ಜೀವವಿಲ್ಲದ ನುಡಿಗಟ್ಟಿನಲ್ಲಿ ಹೊಸತನವಿಲ್ಲದ ವಿಷಯಗಳ ಬಗ್ಗೆ ಕಾವ್ಯ ರಚನೆಮಾಡುತ್ತಿದ್ದರು. ಕಲ್ಪನಾ ವಿಲಾಸ, ಕಾವ್ಯವಸ್ತುಗಳಿಗೊಪ್ಪುವ ಛಂದೋಸ್ವಾತಂತ್ರ್ಯಗಳ ಗಂಧಗಾಳಿಯೂ ಇಲ್ಲದ ಪರಿಸ್ಥಿತಿ. ಹಳೆಯ ಪರಂಪರೆಗೆ ಸೆರೆಯಾಳಾಗಿದ್ದ ಕಾವ್ಯಕನ್ಯೆಯನ್ನು ಸ್ವಚ್ಛಂದವಾದ ಹೊಸನಾಡಿಗೆ ತಂದವರಲ್ಲಿ ಪಂಜೆಯರು ಆರಂಭಪುರುಷರು. 'ಹೊಸನುಡಿ ಗಟ್ಟುಗಳು, ಹೊಸಬಗೆಯ ಲಯ-ತಾನಗಳು, ಲಘುವಾದರೂ ರಸಪೂರ್ಣವಾದ ಕಾವ್ಯ ವಸ್ತುಗಳು. ಸರಳವಾದ ಭಾಷೆ ಇವೆಲ್ಲ ಒಮ್ಮೆಲೆ ಗೋಚರವಾಯಿತು'. ಈ ಮಾತು ಪಂಜೆಯುವರ ಹೊಸಗವನಗಳಿಗೆ ಚೆನ್ನಾಗಿ ಅನ್ವಯಿಸುತ್ತದೆ. ಸಂಸ್ಕೃತ ಅಕ್ಷರವೃತ್ತವಾದ ಮತ್ತೇಭ ವಿಕ್ರೀಡಿತವೃತ್ತದಲ್ಲಿ 'ಕಮಲ', 'ಭೀಷ್ಮನಿರ್ಯಾಣ' ಮೊದಲಾದವುಗಳನ್ನು ಯಶಸ್ವಿಯಾಗಿ ರಚಿಸಿದ ಪಂಜೆಯುವರೇ ಕನ್ನಡಕಾವ್ಯಕ್ಕೆ 'ಹೊಸತನವನ್ನು ತಂದ ಹರಿಕಾರರಾದರು.' ಭಾವಗೀತೆಯ ಮುಖ್ಯ ಅಂಶಗಳಾಗಿರುವ ಭಾವ ಮತ್ತು ಗೇಯತೆಗಳು ಪಂಜೆಯುವರ ಆರಂಭಿಕ ಕಾವ್ಯ

ಕೃಷಿಯಲ್ಲಿ ಸಂಯೋಗವಾಗಿ ಹೊಸಬೆಳೆಗೆ ಕಾರಣವಾಯಿತು. ಸರಳವಾದ ನುಡಿಯಲ್ಲಿ ಒಂದರ ಹಿಂದೆ ಒಂದು ಧಾವಿಸುವ ಶಬ್ದ ಚಿತ್ರಗಳನ್ನು 'ಉದಯರಾಗ', 'ತೆಂಕಣಗಾಳಿ'ಗಳಲ್ಲಿ ಕಾಣಬಹುದು. ತೋರಿಕೆಗೆ ತುಂಬಾ ಸರಳವಾಗಿರುವ 'ನಾಗರ ಹಾವೆ ಹಾವೊಳು ಹೂವೆ' ಕವನದ ಕಲ್ಪನೆ ಸೊಗಸಾದುದಾಗಿದೆ. 'ಈ ಗೀತದ ಲಹರಿಯಲ್ಲಿ ಗಾರುಡಿಗನ ಪುಂಗಿಯ ಮೋಡಿಯಿದೆ' ಎಂದು ವಿಮರ್ಶಕರಿಂದ ಮಾತು ಸರಿಯಾದುದು. ಪ್ರಾಸವು ನಾದಲೋಲರಾದ ಪಂಜೆಯವರ ಕಾವ್ಯದ ಉಸಿರಿನಂತಿದೆ. ಆದಿ, ಅಂತ್ಯ, ಖಂಡ ಪ್ರಾಸಗಳು ಅವರ ಕವನಗಳಲ್ಲಿ ಲೀಲಾಜಾಲವಾಗಿ ಬರುತ್ತವೆ. ಪ್ರಾಸದ ಸೊಗಸಿಗೆ 'ಹುತ್ತರಿ ಹಾಡು', 'ತೆಂಕಣಗಾಳಿಯಾಟ', 'ಡೊಂಬರ ಚೆನ್ನ' ಉತ್ತಮವಾದ ನಿದರ್ಶನಗಳಾಗಿವೆ. ಆದಿ, ಅಂತ್ಯ ನಡು ಪ್ರಾಸಗಳು ಗೇಯತೆಗೆ ಒದಗಿಸುವ ವೇಗ, ಉತ್ಸಾಹದ ಉದಾಹರಣೆಯನ್ನು ನಾವು ಗಮನಿಸಲೇ ಬೇಕಾದ ನಿದರ್ಶನವಿಲ್ಲಿದೆ.

ಬರುವುದು, ಬರಬರ ಭರದಲಿ ಬರುವುದು—
ಬೊಬ್ಬೆಯ ಹಬ್ಬಿಸಿ, ಒಂದೇ ಬಾರಿಗೆ ।
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ, ॥
ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ ।
ಅಬ್ಬರದಲಿ ಭೋರ್ ಭೋರನೆ ಗುಮ್ಮಿಸಿ ॥
ಬರುತದೆ ! ಮೈ ತೋರದೆ ಬರುತದೆ । ಅದೆ —
ನಡುಮುರಿಯುತ ನಗನಾವೆಗೆ, ಕೂವೆಗೆ ।
ಉಡಿಸಿದ ಹಾಯಿಯ ಹರಿಯುತ ಬಿರಿಯುತ ॥
ಹಡಗನು ಕೀಲಿಸಿ, ತುಮುರನು ತೇಲಿಸಿ
ದಡದಲಿ ಝಾಡಿಸಿ, ದೋಣಿಯನಾಡಿಸಿ ॥

ಪಂಜೆಯವರ ಕಾವ್ಯಶಕ್ತಿಯ ಬಗ್ಗೆ ಖ್ಯಾತ ವಿಮರ್ಶಕರಾದ ಶ್ರೀ ಕುರ್ತುಕೋಟಿಯವರ ಮಾತುಗಳು ಗಮನಾರ್ಹವಾಗಿವೆ.* "ಗಾಳಿಯಂತೆ ಹಗುರಾದ ಸಹಜಸುಂದರವಾದ ಇವರ ಕವಿತೆಗಳಲ್ಲಿ ನವೋದಯದ ಸ್ವಾತಂತ್ರ್ಯ ಮಿಡಿಯುತ್ತದೆ. 'ನಾಗರಹಾವು', 'ತೆಂಕಣ ಗಾಳಿಯಾಟ' ಈ ಪದ್ಯಗಳಲ್ಲಿ ಇನ್ನೂ ಆದಿಪ್ರಾಸದ ಬಂಧನವಿದೆ. ಆದರೆ ಈ ಕವಿತೆಗಳ ಮೂಲ ಭಾವನೆ ಮಾತ್ರ ಹಿಂದೆ ನಮ್ಮ ಕಾವ್ಯದಲ್ಲಿ ಎಂದೂ ಗೋಚರವಾಗದಷ್ಟು ಹೊಸದಾಗಿದೆ, 'ತೆಂಕಣ ಗಾಳಿಯಾಟ' ನಿಸರ್ಗದ ಒಂದು ಚಲುವನ್ನು ಕುರಿತು ಬರೆದ ಪದ್ಯವಾಗಿದೆ. ಗುಡುಗುಮಿಂಚು, ಮಳೆಯ ಪರಿವಾರವನ್ನೇ ಕಟ್ಟಿಕೊಂಡು, ಕಣ್ಣಿಗೆ ಕಾಣುವಂತೆ ಆಕಾರವನ್ನು ತಳೆದುಬರುವ ಗಾಳಿಯ ವೇಗ, ಅದರ ಎಲ್ಲಾ ವಿವರಗಳೊಡನೆ ಅಷ್ಟೇ ಚಟುವಟಿಕೆಯಿಂದ ವರ್ಣಿತವಾಗಿದೆ. 'ಹುಡುಗರ ತಲೆತಲೆ ಟೊಪ್ಪಿಯ ಆಟವ, ದಡಬಡ ನಾಡಿಸಿ' ಎಂಬ ವಿವರವಂತೂ ತೀರ ಹೊಸದು. ಕಾವ್ಯದ ತಿರುಳು ಹುಡುಗರ ಮನಸ್ಸಿಗೂ ಮುಟ್ಟುವಷ್ಟು ಹೃದ್ಯವಾಗಿದೆಯಲ್ಲದೆ, ಕವಿತೆಯ ಕಾವ್ಯಗುಣ ಎಳ್ಳಷ್ಟೂ ಕಡಿಮೆಯಾಗಿಲ್ಲ".

ಕೊಡಗಿನ ನಾಡಗೀತವಾಗಲು ಎಲ್ಲಾ ಅರ್ಹತೆ ಸೊಗಸುಗಳನ್ನು ಪಡೆದ 'ಹುತ್ತರಿಹಾಡಿನ ಸೃಷ್ಟಿಯಲ್ಲಿ ಅಸಮಾನ್ಯವಾದ ಕಾವ್ಯಪ್ರತಿಭೆಯು ಎರಕಗೊಂಡಿದೆ. ಕೊಡಗಿನ ಬೆಡಗು, ಸಾಂಸ್ಕೃತಿಕ ಮತ್ತು ಭೌಗೋಲಿಕ ಹಿನ್ನೆಲೆಯೊಂದಿಗೆ ವೀರ ಕೊಡವರ ಸಾಹಸ, ಕ್ಷಾತ್ರಗಳ ವೈಶಿಷ್ಟ್ಯಗಳ ಚಿತ್ರವೂ ಅದಕ್ಕೆ ಸಂವಾದಿಯಾದ ಓಜಸ್ಸಿನ ಸಾಲುಗಳಲ್ಲಿ ಹೊರಹೊಮ್ಮಿದೆ. ಈ ಕವನವನ್ನು ಓದುವಾಗ ರಸಾವೇಶವಾಗಿಯೇ ಆಗುತ್ತದೆ. ಶ್ರೀ

*ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪು. ೪೦.

ಎಸ್. ಅನಂತನಾರಾಯಣರ ಮಾತುಗಳು ಇಂತಿವೆ*. "ಇದರ (ಹುತ್ತರಿಹಾಡು) ಲಯದಿಂದಲೇ ವೈರಕ್ತವೂ ಕುಣಿಯುತ್ತದೆ. ಇಲ್ಲಿಯ ಸರಳವಾದ ಅಚ್ಚಗನ್ನಡ ಪ್ರಯೋಗ, ಹಳೆಯ ರೂಪಕ್ಕೆ ಹೊಸಲಯಗಳಿಂದ ಬಂದ ಹೊಸತನ ಇವುಗಳು ಈ ಕೃತಿಯನ್ನು ಪಂಜೆಯವರ ಅತಿ ಜನಪ್ರಿಯ ಗೀತವನ್ನಾಗಿಸಿವೆ. ಪಂಜೆಯವರ ಈ ಸ್ವತಂತ್ರ ಕವಿತೆಗಳಲ್ಲೆಲ್ಲಾ ನಾವು ಹೊಸ ವಸ್ತುವಿನ ಪ್ರವೇಶ ವನ್ನು, ಹೊಸ ಭಾವದ ಆವಿಷ್ಕಾರವನ್ನೂ, ಹೊಸಹೊಸ ಉಪಮೆಗಳನ್ನೂ ('ಜೋಗುಳ', 'ಹಾವಿನ ಹಾಡು', 'ಹುತ್ತರಿ ಹಾಡು' ಇವುಗಳಲ್ಲಿ ಮತ್ತು ಭಾಷೆಯ ಸರಳತೆಯನ್ನೂ ಕಾಣುತ್ತೇವೆ. ರೂಪ ಮಾತ್ರ ಹಳೆಯದಾದರೂ ಆತ್ಮ ಹೊಸದು."

ಪಂಜೆಯವರು ರಚಿಸಿದ 'ಶೋಕ ಗೀತೆ'ಯು 1935ರಲ್ಲಿ ಕಂಠೀರವದಲ್ಲಿ ಪ್ರಕಟವಾಯಿತು. ಅಂತೆಯೇ 'ಪಾಣಿಪತ'ವೆಂಬ ಯಕ್ಷಗಾನ ದೃಶ್ಯವನ್ನು ರಚಿಸಿದ್ದಾರೆ ಇದು ಹಳೆತು ಹೊಸತರ ಸಮನ್ವಯದಂತಿದೆ. ಹೊಸ ಉಪಮೆಗಳನ್ನು ಕಂಡರೂ ಕವನವು ಸಾಂಪ್ರದಾಯಿಕವೇ ಆಗಿದೆ. "ಎಲ್ಲಿ ಹೋದನು, ಅಮ್ಮ ಪುಟ್ಟಣ್ಣನಮ್ಮಾ" ತಾಯಿಮಕ್ಕಳ ಸಂವಾದ ರೂಪದಲ್ಲಿರುವ ಕರುಣಾರಸದಿಂದ ತುಂಬಿದ ಹಾಡು.

ಹೊಸಗನ್ನಡ ಕಾವ್ಯದಲ್ಲಿ ಕಥನಕವನಗಳು ತುಂಬಾ ಸೃಷ್ಟಿಯಾಗಿವೆ. ಇಲ್ಲೂ ಪಂಜೆಯವರೇ ಆಧುನಿಕಕಾಲದಲ್ಲಿ ಆದ್ಯರು. '1900ರ ವೇಳೆಗೇ ಪಂಜೆಯವರ ಕಥನಕವನಗಳು ಪ್ರಕಟವಾಗಿದ್ದವು'* 'ಕಡೆಕಂಜಿ'ಯೆಂಬುದು ಪಂಜೆಯವರ ಪ್ರಸಿದ್ಧವಾದ ಕಥನಕವನ. ಕುಡಿತದಿಂದ ಬಡವನಾದ, ನಿರ್ಗತಿಕ

*ಹೊಸಗನ್ನಡ ಕಾವ್ಯದ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ಪು. ೭೩.

ನಾದ ಬಿರುಮ ಸೆಟ್ಟಿಯು ಕೊನೆಯದಾದ ದನದ ಕರುವನ್ನು ಹಿಡಿದುಕೊಂಡು ಅಳುತ್ತಿರುವ ದೃಶ್ಯವನ್ನು ಕಂಡ ಕಾರ್ಕಳದ ಅರಸನಾದ ಚಂದ್ರನಾಥನು ಕರುಣೆದೋರುವ ಕತೆಯಿದು. ತುಳುನಾಡ ಹಿನ್ನೆಲೆಯಲ್ಲಿ ಸಹಜವಾಗಿ, ಸಾಕಷ್ಟು ರಸವತ್ತಾಗಿ ಚಿತ್ರಿತವಾಗಿದೆ. ಸರಾಗವಾಗಿ ಹಾಡಲು ಅನುಕೂಲವಾಗುವಂತೆ ಚೌಪದಿಯನ್ನು ಬಳಸಿಕೊಂಡಿದ್ದಾರೆ. ಮಕ್ಕಳಿಗಾಗಿ ರಚಿಸಿದ 'ನಾಗಣ್ಣನ ಕನ್ನಡಕವು' ಪಂಜೆಯವರ ಇನ್ನೊಂದು ಕಥನ ಕವನ. ಇದು ವಿನೋದದಿಂದ ಕೂಡಿ ಸ್ವಾರಸ್ಯಕಾರಿಯಾಗಿದೆ.

'ಡೊಂಬರ ಚೆನ್ನ' ಯೆಂಬ ಕವನ ತುಂಬಾ ಸೊಗಸಾದ ರಚನೆಯಾಗಿದೆ. ಬಂಗರಸನ ಕುಟುಂಬಕ್ಕೆ ಸೇರಿದ ಸುನಂದೆಯು ಪುಟ್ಟ ಮಗಳಾದ ರತ್ನಾವತಿಯನ್ನು ಜತೆಗೊಯ್ದು, ಡೊಂಬ ನನ್ನು ಹಿಂಬಾಲಿಸಿ ಓಡಿದವಳು. ರತ್ನಾವತಿಯು ಡೊಂಬರ ಚೆನ್ನೆಯಾಗಿ ಬಂಗರಸನೆದುರು ಆಟವನ್ನು ಪ್ರದರ್ಶಿಸಿದಾಗ ಬಂಗರಸನು ಮೋಹಿತನಾದಾಗ ಡೊಂಬನು ಹೊಳೆಗೆ ಹಾರಿದ ಪ್ರಸಂಗದಲ್ಲಿ ಪೂರ್ವಕತೆಯು ಬಯಲಿಗೆ ಬರುವ ಈ ಕತೆಯು ಹೃದ್ಯವಾಗುವಂತೆ ಗೋವಿನ ಮಟ್ಟಿನಲ್ಲಿ ರಚನೆಯಾಗಿದೆ. ಕತೆಯು ಆಸಕ್ತಿಯುಳಿವಂತೆ, ಕುತೂಹಲ ಹೆಚ್ಚಿಸುವಂತೆ ಹೇಳುವ ಪಂಜೆಯವರ ಕಲೆಯನ್ನಿಲ್ಲಿ ಕಾಣಬಹುದು. ಡೊಂಬರಾಟದ ವಿವಿಧ ವೇಗ ಗತಿಯ ಆಟಗಳ ಶಬ್ದಚಿತ್ರಗಳು ಕಣ್ಣಿಗೆ ಕಟ್ಟು ವಂತಿದೆ, ಉತ್ಕೃಷ್ಟವಾಗಿದೆ. ಓದುಗರು ಕವಿಯು ಸೃಷ್ಟಿಸಿದ ವಾತಾವರಣದಲ್ಲಿ ಒಂದಾಗಿ ಹೋಗುತ್ತಾರೆ. ನಮ್ಮ ಅತ್ಯು ತ್ತಮ ಕಥವಕವನಗಳಲ್ಲಿ ಇದೊಂದಾಗಿದೆಯೆಂದು ಧೈರ್ಯವಾಗಿ ಹೇಳಬಹುದು. '....ಹೊಸಗನ್ನಡ ಕವಿತೆಗೆ ಇಂಗಿಷಿ ರುಚಿ ಯನ್ನು ತೋರಿ, ತರಿಸಿ ಹೊಸಕವಿತೆಯ ಹುಟ್ಟಿಗೆ ಕಾರಣರಾದ

ಕವಿಗಳ ಗುಂಪಿನಲ್ಲಿ ಪಂಜೆಯವರು ಹಿರಿಯರು. ಹಾಗೆಯೇ ಕಥನಕವನಗಳನ್ನು ಇಂಗ್ಲಿಷ್ ಕಥನಕವನಗಳ ಮಾದರಿಯಲ್ಲಿ ಅವರು ಮೊದಲಿಗರೆಂದು ಹೇಳಬಹುದು. ಈ ರೀತಿಯ ಕವಿತೆಯ ರಚನೆಯಲ್ಲಿಯೂ ಅವರದು ** ಸಿದ್ಧಹಸ್ತ.

1915ರಲ್ಲಿ ಪಂಜೆಯವರು ತನ್ನ ಹುದ್ದೆಯಲ್ಲೇ ವರ್ಗವಾಗಿ ಮಂಗಳೂರಿಗೆ ಮರಳಿಬಂದರು, ಅಧ್ಯಾಪಕರಲ್ಲಿ ಹೊಸ ದೃಷ್ಟಿ, ಚೈತನ್ಯಗಳನ್ನು ತುಂಬುವ ತನ್ನ ಪ್ರಿಯವಾದ ಕಾಯಕವನ್ನು ಮಂಗಳೂರು ತಾಲೂಕಲ್ಲೂ ಮುಂದುವರಿಸಿದರು. ಜತೆಯಲ್ಲಿ ಕನ್ನಡ ಸಾಹಿತ್ಯದ ಪ್ರಚಾರವನ್ನು ಉತ್ಸಾಹದಿಂದ ನಡೆಸಿದರು. ಕದ್ರಿಯಲ್ಲಿದ್ದ ಅವರ ಮನೆಯು ಸಾಹಿತ್ಯಪ್ರೇಮಿಗಳ ಸ್ಫೂರ್ತಿಯ ಕೇಂದ್ರವಾಗಿತ್ತು. ಯಾವ ಬರಹಗಾರನಿಗೂ ನಿರ್ಮತ್ಸರದಿಂದ ಉತ್ತೇಜನಕೊಡುವವರು ಪಂಜೆಯವರು. ಅಂತೆಯೇ ತಮ್ಮನ್ನು ಸಂದಿಸಿದವರನ್ನು ತನ್ನಂತೆಯೇ ಕನ್ನಡ ಪ್ರೇಮಿಯನ್ನಾಗಿ ಮಾಡುತ್ತಿದ್ದರು. ಪಂಜೆಯವರ ಶಿಕ್ಷಣ ಕ್ಷೇತ್ರದ ಕಾರ್ಯಗಳಿಗೆ ಮೊದಲಿನಂತೆ ಮಂಗಳೂರ ಹಲವರು ಕಿರುಕುಳವನ್ನು ಕೊಡದಿರಲಿಲ್ಲ. ಜಿಲ್ಲಾ ಬೋರ್ಡಿನ ಸುಳ್ಳು ಸುಳ್ಳೇ ಅಪಾದನೆಗಳು ವಿದ್ಯಾ ಇಲಾಖೆಯ ಡೈರಕ್ಟರರ ತನಿಖೆಯ ಬಳಿಕ ಸಂಪೂರ್ಣ ಸುಳ್ಳೆಂದು ತಿಳಿದುಬಂತು. ಪಂಜೆಯವರ ಮೇಲಿದ್ದ ಗೌರವವು ಹೆಚ್ಚಿತು.

ಮಂಗಳೂರಿನ ಪ್ರಾಥಮಿಕ ಶಿಕ್ಷಕ ತರಬೇತಿ ಸಂಸ್ಥೆಯ ಮುಖ್ಯೋಪಾಧ್ಯಾಯರಾಗಿ ಪಂಜೆಯವರು ನೇಮಕಗೊಂಡಾಗ

ಶ್ರೀ ಎಸ್. ಅನಂತನಾರಾಯಣ: ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ' ಪು. ೨೯೪. ** ಅದೇ ಪುಟ. ೨೯೭

ತಮ್ಮ ಕನಸಿನ ಆದರ್ಶಗಳನ್ನು ಕಾರ್ಯರೂಪಕ್ಕೆ ಳಿಸುವ ಅವಕಾಶ ದೊರಗಿತು. ವಿದ್ಯಾಪ್ರಸಾರದಿಂದ ಎಳೆಮಕ್ಕಳು ಹೆಚ್ಚು ಪ್ರಯೋಜನ ಪಡೆಯಬೇಕಾದರೆ, ಶಿಕ್ಷಕರು ಮಕ್ಕಳ ಮನಸ್ಸನ್ನು ಅರಿಯಬೇಕು. ಅಲ್ಲದೆ ಶಿಕ್ಷಕರ ತರಬೇತಿಯು ಕ್ರಿಯಾಶೀಲವೂ ಉತ್ಸಾಹದಾಯಿಯೂ ಆಗಬೇಕೆಂಬ ಸತ್ಯವನ್ನು ಪಂಜೆಯವರು ಮನಗಂಡಿದ್ದರು. ಶಿಕ್ಷಕರ ಸರಿಯಾದ ತರಬೇತಿಗಾಗಿ ಆ ಸಂಸ್ಥೆಯ ಅಂಗವಾಗಿದ್ದ ಪ್ರಾಥಮಿಕ ಶಾಲೆಯನ್ನು ಒಂದು ಸುಸಜ್ಜಿತ ಶಾಲೆಯನ್ನಾಗಿ ಮಾಡಲು ಪಂಜೆಯವರು ರಾತ್ರಿಹಗಲು ಶ್ರಮಿಸಿದರು. ಪಂಜೆಯವರ ಸುದೈವದಿಂದ ನುರಿತ ಅಧ್ಯಾಪಕರಾದ ಉಳ್ಳಾಲ, ಕೊರೆಯ್ಯಾ, ಎಂ, ಬಾಬು, ಓಬಯ್ಯ ಮಾಸ್ತರರಂತಹ ಸಂಪೂರ್ಣ ಬೆಂಬಲ, ಶ್ರದ್ಧೆಯ ದುಡಿಮೆಗಳೂ ದೊರೆತವು. ಮೇಲಾಗಿ ಈ ಹೊಸತನದ ಕೃಷಿಗೆ ಪಂಜೆಯವರನ್ನು ಮೆಚ್ಚಿಕೊಂಡ ವಿದ್ಯಾಧಿಕಾರಿ ಜೆ. ಎ. ಏಟ್ಸ್ ಅವರ ಪ್ರೋತ್ಸಾಹ. ತರಬೇತಿ ಸಂಸ್ಥೆಯ ಶಾಲೆಗಾಗಿ ತುಂಬಾ ಆಟಿಕೆಗಳು, ಸುಂದರವಾದ ಉದ್ಯಾನ, ಪ್ರಾಣಿಪಕ್ಷಿಗಳು ದೊರೆತವು. ನಗರದಲ್ಲೇ ಅತ್ಯುತ್ತಮ ಪ್ರಾಥಮಿಕ ಶಾಲೆಯಾಗಿ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಆಕರ್ಷಿಸಿದಾಗ, ಅವಕಾಶವಿಲ್ಲದೆ ಹಿಂತೆರಳುವಂತಾಯಿತು. ಪಂಜೆಯವರು ವಿದ್ಯಾಶ್ರಮದ ಆಚಾರ್ಯರಾದರು; ಅವರ ಆಶ್ರಮದಲ್ಲಿ ತೆರಬೇತಿ ಪಡೆದ ಅಧ್ಯಾಪಕರು ತಮ್ಮ ಕರ್ತವ್ಯವನ್ನು ಸೊಗಸಾಗಿ ನಿರ್ವಹಿಸುವುದರಲ್ಲಿ ಸಂದೇಹವಿಲ್ಲ. ಪಂಜೆಯವರ ಪ್ರಭಾವವು ದೀರ್ಘಕಾಲವರೆಗಿದ್ದು ಶಿಕ್ಷಣದ ಗುಣಮಟ್ಟವನ್ನು ಏರಿಸಿದುದರಲ್ಲಿ ಎರಡು ಮಾತಿಲ್ಲ.

ರಂಜಕವಾದ ಸರಳಕತೆಗಳು ಮಕ್ಕಳ ಶಿಕ್ಷಣದ ಅವಶ್ಯವಾದ ಅಂಗವೆಂಬರಿವು ನಾಡಿನಲ್ಲಿ ಪಂಜೆಯವರ ಹೊರತಾಗಿ

ಬೇರೆಯವರಲ್ಲಿ ಉದಯಿಸಿರಲಿಲ್ಲ. ಅವರು ಶಿಶುಸಾಹಿತ್ಯ, ಬಾಲಸಾಹಿತ್ಯಗಳ ಜನಕರೆಂಬುದಕ್ಕಿಂತಲೂ ಆ ಬಗೆಯ ಸಾಹಿತ್ಯ ನಿರ್ಮಾಣವು ಶಾಸ್ತ್ರೀಯವಾದ ತತ್ವಗಳ ಮೇಲೆ ಅವರಿಂದ ನಿರ್ಮಾಣವಾಗಿದೆಯೆಂಬುದು ಹೆಚ್ಚು ಮಹತ್ವದ ವಿಚಾರವಾಗಿದೆ, ಶೈಶವ, ಬಾಲ್ಯದ ಹಂತಗಳಲ್ಲಿ ಮಾನವ ಜೀವಿಯು ಪಡೆದಿರುವ ಗ್ರಹಣಶಕ್ತಿ, ತೋರಿಸುವ ಪ್ರತಿಕ್ರಿಯೆ ಮತ್ತು ಅನುಕರಣ ಶೀಲತೆ ಮುಂತಾದವುಗಳನ್ನು ಪಂಜೆಯವರು ಸೂಕ್ಷ್ಮವಾಗಿ ಕುತೂಹಲದಿಂದ ಅಭ್ಯಸಿಸಿದವರು. ಮನೆಯಲ್ಲೇ ಪರೋಕ್ಷ ವಾಗಿ ಪ್ರಯೋಗಗಳನ್ನು ನಡೆಸಿ ಅರಿತವರು. ಮಕ್ಕಳ ಮಾನಸಿಕ ಪ್ರಪಂಚಕ್ಕೆ ಒಳಪಟ್ಟ ವಿಷಯಗಳನ್ನು ಸರಳವಾಗಿ ಹೇಳಿದರೇನೇ ಕತೆಯು ಸರಿಯಾಗಿ ಮುಟ್ಟುತ್ತದೆ. ಕೋತಿ, ಕಾಗೆಗಳ ವ್ಯವ ಹಾರಗಳು ಮಕ್ಕಳಿಗೆ ಹಿಡಿಸಿದಷ್ಟು ಅರ್ಜುನನ ಪರಾಕ್ರಮ, ಭೀಷ್ಮನ ಪ್ರತಿಜ್ಞೆ, ಸೀತಾಪರಿತ್ಯಾಗ ಹಿಡಿಸವು. ಮಕ್ಕಳ ಕತೆಯಲ್ಲಿ ಅದ್ಭುತ ರಸವಿದ್ದರೆ ಅವರ ಕಲ್ಪನಾ ಶಕ್ತಿಯು ಬೆಳೆಯುತ್ತದೆ. ಜಡ ನಿರೂಪಣೆಯ ಬದಲು ಸಹಜವಾದ ಸಂಭಾಷಣೆಯು ಅವರಿಗೆ ರುಚಿಸುತ್ತವೆ. ಚಿಕ್ಕ ವಾಕ್ಯಗಳಲ್ಲಿ ಸ್ಪಷ್ಟವಾದ ಚಿತ್ರ ಗಳನ್ನು ಕೊಡುವುದೂ ಅಗತ್ಯ. 'ಸೀತೆ ದುಃಖಿಸಿದಳು' ಅನ್ನುವು ದರ ಬದಲು 'ಆಕೆ ಅಂಗೈಯ ಮೇಲೆ ಗಲ್ಲವನ್ನು ಇಟ್ಟು, ಮೂಗಿನಿಂದ ನಿಟ್ಟುಸಿರು ಬಿಡುತ್ತಾ ಕಣ್ಣೀರು ತುಂಬಿ - ದುಃಖಿಸಿ ದಳು' ಎಂದರೆ ದುಃಖದ ಚಿತ್ರವು ಮಕ್ಕಳ ಮನಸ್ಸಿಗೆ ಚೆನ್ನಾಗಿ ಹೊಳೆಯುವುದು*. ಪಂಜೆಯವರು ಈ ಮುಖ್ಯಾಂಶಗಳನ್ನು

* ಬಾಲಸಾಹಿತ್ಯದ ಕುರಿತು ಪಂಜೆಯವರ ಬೆಲೆಬಾಳುವ ವಿಚಾರಗಳು 'ಬಾಲಕಥಾವಳಿಯ' ಮುನ್ನುಡಿಯಲ್ಲೂ, 'ಪಂಜೆಯವರ ನೆನಪಿಗಾಗಿ' ಗ್ರಂಥದಲ್ಲೂ (ಪು. 59. ಹೈದರಾಬಾದ್ ಭಾಷಣ) ಕಾಣಬಹುದು.

ಬೇರೆಯವರಲ್ಲಿ ಉದಯಿಸಿರಲಿಲ್ಲ. ಅವರು ಶಿಶುಸಾಹಿತ್ಯ, ಬಾಲಸಾಹಿತ್ಯಗಳ ಜನಕರೆಂಬುದಕ್ಕಿಂತಲೂ ಆ ಬಗೆಯ ಸಾಹಿತ್ಯ ನಿರ್ಮಾಣವು ಶಾಸ್ತ್ರೀಯವಾದ ತತ್ವಗಳ ಮೇಲೆ ಅವರಿಂದ ನಿರ್ಮಾಣವಾಗಿದೆಯೆಂಬುದು ಹೆಚ್ಚು ಮಹತ್ವದ ವಿಚಾರವಾಗಿದೆ, ಶೈಶವ, ಬಾಲ್ಯದ ಹಂತಗಳಲ್ಲಿ ಮಾನವ ಜೀವಿಯು ಪಡೆದಿರುವ ಗ್ರಹಣಶಕ್ತಿ, ತೋರಿಸುವ ಪ್ರತಿಕ್ರಿಯೆ ಮತ್ತು ಅನುಕರಣ ಶೀಲತೆ ಮುಂತಾದವುಗಳನ್ನು ಪಂಜೆಯವರು ಸೂಕ್ಷ್ಮವಾಗಿ ಕುತೂಹಲದಿಂದ ಅಭ್ಯಸಿಸಿದವರು. ಮನೆಯಲ್ಲೇ ಪರೋಕ್ಷ ವಾಗಿ ಪ್ರಯೋಗಗಳನ್ನು ನಡೆಸಿ ಅರಿತವರು. ಮಕ್ಕಳ ಮಾನಸಿಕ ಪ್ರಪಂಚಕ್ಕೆ ಒಳಪಟ್ಟ ವಿಷಯಗಳನ್ನು ಸರಳವಾಗಿ ಹೇಳಿದರೇನೇ ಕತೆಯು ಸರಿಯಾಗಿ ಮುಟ್ಟುತ್ತದೆ. ಕೋತಿ, ಕಾಗೆಗಳ ವ್ಯವ ಹಾರಗಳು ಮಕ್ಕಳಿಗೆ ಹಿಡಿಸಿದಷ್ಟು ಅರ್ಜುನನ ಪರಾಕ್ರಮ, ಭೀಷ್ಮನ ಪ್ರತಿಜ್ಞೆ, ಸೀತಾಪರಿತ್ಯಾಗ ಹಿಡಿಸವು. ಮಕ್ಕಳ ಕತೆಯಲ್ಲಿ ಅದ್ಭುತ ರಸವಿದ್ದರೆ ಅವರ ಕಲ್ಪನಾ ಶಕ್ತಿಯು ಬೆಳೆಯುತ್ತದೆ. ಜಡ ನಿರೂಪಣೆಯ ಬದಲು ಸಹಜವಾದ ಸಂಭಾಷಣೆಯು ಅವರಿಗೆ ರುಚಿಸುತ್ತವೆ. ಚಿಕ್ಕ ವಾಕ್ಯಗಳಲ್ಲಿ ಸ್ಪಷ್ಟವಾದ ಚಿತ್ರ ಗಳನ್ನು ಕೊಡುವುದೂ ಅಗತ್ಯ. 'ಸೀತೆ ದುಃಖಿಸಿದಳು' ಅನ್ನುವು ದರ ಬದಲು 'ಆಕೆ ಅಂಗೈಯ ಮೇಲೆ ಗಲ್ಲವನ್ನು ಇಟ್ಟು, ಮೂಗಿನಿಂದ ನಿಟ್ಟುಸಿರು ಬಿಡುತ್ತಾ ಕಣ್ಣೀರು ತುಂಬಿ - ದುಃಖಿಸಿ ದಳು ಎಂದರೆ ದುಃಖದ ಚಿತ್ರವು ಮಕ್ಕಳ ಮನಸ್ಸಿಗೆ ಚೆನ್ನಾಗಿ ಹೊಳೆಯುವುದು*. ಪಂಜೆಯವರು ಈ ಮುಖ್ಯಾಂಶಗಳನ್ನು

* ಬಾಲಸಾಹಿತ್ಯದ ಕುರಿತು ಪಂಜೆಯವರ ಬೆಲೆಬಾಳುವ ವಿಚಾರಗಳು 'ಬಾಲಕಥಾವಳಿಯ' ಮುನ್ನುಡಿಯಲ್ಲೂ, 'ಪಂಜೆಯವರ ನೆನಪಿಗಾಗಿ' ಗ್ರಂಥದಲ್ಲೂ (ಪು. 59. ಹೈದರಾಬಾದ್ ಭಾಷಣ) ಕಾಣಬಹುದು.

ಗಮನದಲ್ಲಿರಿಸಿ ಮಕ್ಕಳಿಗಾಗಿ ಕತೆಗಳನ್ನು ಹೆಣೆದರು. ವಾಕ್ಯಗಳು ಬೇಸರತರಿಸದೆ ಪುನರುಕ್ತಿಸಿದಾಗ ಭಾಷಾಪರಿಚಯವೂ, ವಿಷಯದ ಅರಿವೂ ಹೆಚ್ಚುವುದರಿಂದ ಆ ಕ್ರಮವನ್ನೂ ಕಥಾತಂತ್ರದಲ್ಲಿ ಅಳವಡಿಸಿದರು. ಅವರಿಂದ ರಚಿತವಾದ 'ಬಾಲಕಥಾವಳಿ'ಯು 1916ರಲ್ಲಿ ಬಾಸೆಲ್ ಮಿಶನ್ ಸಂಸ್ಥೆಯಿಂದ ಪ್ರಚುರವಾಯಿತು. ಪಂಜೆಯವರ ಬಾಲಸಾಹಿತ್ಯದಲ್ಲಿ ಆಡು, ಇಲಿ, ಕಾಗೆ, ಕೋಳಿ, ಗುಬ್ಬಿ, ಬೆಕ್ಕು, ಪಟ್ಟೆಹುಲಿ ಕರಡಿಗಳೇ ವ್ಯವಹರಿಸುತ್ತವೆ[1]. ಪಂಜೆಯವರ ಬಾಲಸಾಹಿತ್ಯ ಸೃಷ್ಟಿಯಿಂದಾಗಿ ಈ ಜಿಲ್ಲೆಯ ಶಾಲಾಮಕ್ಕಳ ಭಾವಜೀವನವು ಆನಂದಮಯವಾಯಿತು; ಶ್ರೀಮಂತವಾಯಿತು. ಆ ದಿನಗಳಲ್ಲಿ ಬಾಲಸಾಹಿತ್ಯವೆಂಬುದು ನಮ್ಮ ನಾಡಿನಲ್ಲಿ ಅನ್ಯತ್ರ ಇದ್ದಿರಲಿಲ್ಲ. ಮಕ್ಕಳ ಕತೆಗಳಲ್ಲಿ ಹೆಚ್ಚಿನವು ಪಂಜೆಯವರ ಸ್ವತಂತ್ರ ಕಲ್ಪನೆಗಳು. ಆದರೆ ಕೆಲವೊಂದು ಜನಪದದಲ್ಲಿ ಪ್ರಚಲಿತವಾದವುಗಳು. 'ಅಜ್ಜಿ ಸಾಕಿದ ಮಗು, 'ಅಗೋಳಿ ಮಂಜಣ್ಣ, ಕೋಟಿ ಚೆನ್ನಯ ಈ ಸಾಲಿಗೆ ಸೇರಿದವುಗಳು. ಕೊನೆಯದನ್ನು ಮಕ್ಕಳ ಕತೆಯೆನ್ನಲಾಗದು. ಆಧುನಿಕತೆಯ ಯಂತ್ರಪ್ರಧಾನವಾದ ನಾಗರಿಕತೆ, ನಗರೀಕರಣದ ಹಾವಳಿಗಳಿಂದಾಗಿ ನುಚ್ಚುನೂರಾಗುತ್ತಿದ್ದ ಜಾನಪದದ ಸೊಗಸಾದ ಕತೆಯನ್ನು ಪಂಜೆಯವರು ತಮ್ಮದೇ ಆದ ವಿಶಿಷ್ಟವಾದ

---

1 ಪಂಜೆಯವರು ಮಕ್ಕಳಿಗಾಗಿ ರಚಿಸಿದ ಕತೆಗಳು: ಅಂಗಳದುಗ್ಗ, ಅರ್ಗಣೆಮುದ್ದೆ, ಇಲಿಗಳ ಥಕ್ಕಥೈ, ಕೊಕ್ಕೊಕ್ಕೋ ಕೋಳಿ, ಗುಡುಗುಡುಗುಮ್ಮಟ ದೇವರು, ಗೋಣಿತಟ್ಟಿನ ಪಟ್ಟೆಹುಲಿ, ಬಿಟ್ಟಿ ಬಸವಯ್ಯ, ಬೊಕ್ಕೆಬಾಯಿ ಕೊಕ್ಕರಾಜ, ಮಾತಾಡೋ ರಾಮಪ್ಪ, ಮೂರು ಕರಡಿಗಳು, ಮೆಣಸಿನ ಕಾಳಪ್ಪ, ಬೆಕ್ಕಿನ ಬಿಡಾರ ಬೇರೆ, ಹೇನು ಸತ್ತು ಕಾಗೆ ಬಡವಾಯಿತು, ಅಗೋಳಿ ಮಂಜಣ್ಣ, ಅಜ್ಜಿ ಸಾಕಿದ ಮಗು ಇತ್ಯಾದಿ.

ಶೈಲಿ ನಿರೂಪಣೆಗಳಿಂದ ಉಳಿಸಿದ್ದಾರೆ. ಈ ಪ್ರದೇಶಗಳಲ್ಲಿ ಮಾತ್ರವಿರುವ ಆಡುನುಡಿಗಳಲ್ಲಿ ಈ ಸಾಹಿತ್ಯದ ಬಳಸಿದಾಗ ಮಂಗಳೂರಿನ ಘನಪಂಡಿತರು ಗೇಲಿಮಾಡಿದರು. ಅವರ ಭಾಷೆ ಕನ್ನಡವೇ ಅಲ್ಲವೆಂದರು. ಇಂದು ಆಡುನುಡಿಗಳು ಅನುಭವವನ್ನು ವ್ಯಕ್ತಪಡಿಸುವುದಕ್ಕೆ ಎಷ್ಟು ಅಗತ್ಯವೆಂಬುದನ್ನು ನಾವೆಲ್ಲ ಬಲ್ಲೆವು. ಪಂಜೆಯವರ ಹಾದಿಯಲ್ಲಿ ಮುಂದುವರಿದವರು ದಿ| ಗೋವಿಂದ ಪೈಯವರು. ಜನಪದದಿಂದ ಕತೆಗಳನ್ನು ಆಯ್ಕೆ ಮಾಡಿದುದರ ಬಗ್ಗೆ ಪೈಯವರ ಅಭಿಪ್ರಾಯವೂ ಗಮನಾರ್ಹವಾಗಿದೆ. "ಅವಲ್ಲಿ ನಮ್ಮ ತಲೆಮಾರಿನಲ್ಲೇ ಖಿಲವಾಗುತ್ತಿದ್ದ, ಅತಏವ ಮುಂದಣ ತಲೆಮಾರುಗಳಿಗೆ ಹೇಗೂ ನಾಸ್ತಿಯಾಗುತಿದ್ದ, ತಲ ತಲಾಂತರಗಳಿಂದ ಹೊತ್ತು ಕಂತುವುದೆ, ಮನೆಮನೆಗಳಲ್ಲಿ ದೀಪಹಚ್ಚುವುದೆ ಮಕ್ಕಳಿಗೆ ಹೇಳಿಬರುತ್ತಿದ್ದ ಆ ವರೆಗೆ ಮಂದಿಯ ಬಾಯಲ್ಲಿದ್ದುವೇ ವಿನಾ ಸದಾಕಾಲಕ್ಕಾಗಿ ಅಚ್ಚಿನಲ್ಲಿ ರಕ್ಷಿಸಿಲ್ಲದ ಹಾಗೂ ಎಂದಿಗೂ ಸವಿಯೂ ಕುಂದದ ಅನೇಕ ಅಜ್ಜಿಕತೆಗಳನ್ನು ಜೋಪಾನ ಮಾಡಿ, ಸದಾಕಾಲಕ್ಕೆ ಕಾದಿರಿಸಿಕೊಂಡಿದೆ. ಈ ಕಥೆಗಳೆಲ್ಲವೂ ಕಿರಿಯರೇ ಅಲ್ಲ, ಹಿರಿಯರೂ ಓದಿ ಮೆಚ್ಚುವಷ್ಟು ಸೊಂಪಾಗಿ ಬರೆಯಲ್ಪಟ್ಟಿವೆ, ಮೆಚ್ಚಿ ಇಂಪಾಗಿ ಬರೆಯಲ್ಪಟ್ಟಿವೆ. ಅವನ್ನು ಓದಿಯೇ ತಿಳಕೊಳ್ಳಬೇಕು. ರುಚಿಯನ್ನ, ರುಚಿಸಿಯೇ ಚಪ್ಪರಿಸಬೇಕು ಮನವನ್ನ"*

ಮಕ್ಕಳ ಸಾಹಿತ್ಯದ ಪ್ರಕಾಶನಕ್ಕಾಗಿಯೇ ಪಂಜೆಯವರು ಬಾಲಸಾಹಿತ್ಯ ಮಂಡಲ ಲಿಮಿಟೆಡ್ ಸಂಸ್ಥೆಯನ್ನು ಕಟ್ಟಿದರು. ಉಳ್ಳಾಲ ಮಂಗೇಶರಾಯರು, ಮಾಬೆನ್ ಈ ಸಂಸ್ಥೆಯ ಅನ್ಯ

*ದಿ| ಗೋವಿಂದ ಪೈ, ಪಂಜೆಯವರ ನೆನಪಿಗಾಗಿ ಪು. ೧೦೫.

ಪಾಲುದಾರರಾಗಿ ಸಹಕರಿಸಿದವರು. 1921ರಿಂದ ಇಂದಿನ ತನಕ ಮಕ್ಕಳ ಹಾಗೂ ಇತರ ಕೃತಿಗಳ ಮೂಲಕ ನುಡಿಯ ಸೇವೆಯನ್ನು ಚೆನ್ನಾಗಿ ಮಾಡುತ್ತಾ ಬಂದಿದೆ. ಪಂಜೆಯವರಿಂದ ರಚಿತವಾದ ಅನೇಕ ಮಕ್ಕಳ ಕತೆಗಳ ಇಂಗ್ಲಿಷ್ ಅನುವಾದಗಳು ಬಾಲಸಾಹಿತ್ಯ ಮಂಡಲದಿಂದ ಪ್ರಕಾಶಿತವಾಗಿವೆ.

ಪಂಜೆಯವರು ಟ್ರೈನಿಂಗ್ ಸಂಸ್ಥೆಯಲ್ಲಿರುವಾಗ ಅಲ್ಲಲ್ಲಿ ವಿದ್ಯಾಪರಿಷತ್ತುಗಳನ್ನು ಏರ್ಪಡಿಸುತ್ತಿದ್ದರು, ಸಹಕಾರ ಚಳುವಳಿಯಲ್ಲಿಯೂ ಭಾಗವಹಿಸಿ ತನ್ನ ಬೆಂಬಲವನ್ನು ನೀಡುತ್ತಿದ್ದರು. ನಮ್ಮ ಸಾಮಾಜಿಕ ಸಂಪ್ರದಾಯದಲ್ಲಿದ್ದ ಅನೇಕ ಸಂಕುಚಿತ ದಯಾಹೀನ ನಡೆಗಳು ಅವರಿಗೆ ಸೇರುತ್ತಿರಲಿಲ್ಲ. ಇಂತಹ ಪ್ರಸಂಗಗಳಲ್ಲಿ ಸಂಪ್ರದಾಯವನ್ನು ಬಿಟ್ಟು ತನ್ನ ಹೃದಯವು ಸೂಚಿಸಿದ ಮಾರ್ಗದಲ್ಲಿ ನಡೆದವರು ಪಂಜೆಯವರು. ಅವರ ಮಾನವೀಯ ದೃಷ್ಟಿಯು ಬಾಯ್ಮಾತಿನ ಬಡಿವಾರವಾಗಿರಲಿಲ್ಲ. ಮನಸ್ಸಿಗೆ ಸರಿಕಂಡ ತತ್ವಗಳನ್ನು ಆಚರಿಸುವ ಪ್ರಮಾಣಿಕ ಬಾಳು ಅವರದ್ದಾಗಿತ್ತು. ಹರಿಜನರು ಅನುಭವಿಸುತ್ತಿದ್ದ ಕಷ್ಟ ಕಂಡು ಮರುಗಿದ ಕವಿಹೃದಯವು "ಉಳ್ಳಯ್ಯಾ, ದಯೆಗೊಳ್ಳಯ್ಯಾ' ಎಂಬ ಕವನವನ್ನು ರಚಿಸಿತು. ಹರಿಜನ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ತಮ್ಮ ನೆರವನ್ನು ಕೊಡುತ್ತಿದ್ದರಲ್ಲದೆ 1920ರಲ್ಲಿ ಉಳ್ಳಾಲರ ಜತೆಯಲ್ಲಿ ಹರಿಜನರೊಂದಿಗೆ ಸಹಪಂಕ್ತಿ ಭೋಜನವನ್ನು ಮಾಡಿದ್ದರು. ಈ ಬಗ್ಯೆ ಅತೀ ಸಂಕುಚಿತ ಧೋರಣೆಯಿದ್ದ ಸಮಾಜದಲ್ಲಿ ಪಂಜೆಯವರ ಕಾರ್ಯಗಳೇನೂ ಸಣ್ಣವಲ್ಲ. ಗುಣಗಳಿಗಾಗಿ ವ್ಯಕ್ತಿಯನ್ನು ಮೆಚ್ಚುತ್ತಿದ್ದ ಅವರಿಗೆ ತಮ್ಮ ಸಮಾಜದ ಜನರ ನಡೆಗಳನೇಕ ಪ್ರಿಯವಾಗಿರಲಿಲ್ಲ. * ಒಳ್ಳೆತನವು ಯಾವ ಮೂಲೆಯಲ್ಲೂ ಇರಬಹುದಾದದ್ದೆಂದು ಅವರು ತಿಳಿದವರಾಗಿದ್ದರು.

1921ರಿಂದ 1928ರ ತನಕ ಪಂಜೆಯವರು ಬೆಟ್ಟದ ನಾಡಾದ ಕೊಡಗಿನಲ್ಲಿ ಆರಂಭದಲ್ಲಿ ಅಸಿಸ್ಟಾಂಟ್ ಶಾಲಾ ಇನ್ಸ್‌ಪೆಕ್ಟರರಾಗಿಯೂ ಬಳಿಕ ಮಡಿಕೇರಿಯ ಸೆಂಟ್ರಲ್ ಸ್ಕೂಲಿನ ಮುಖ್ಯೋಪಾಧ್ಯಾಯರಾಗಿಯೂ ಸೇವೆಸಲ್ಲಿಸಿದರು. ಸೆಂಟ್ರಲ್‌ಸ್ಕೂಲಿನ ಹುದ್ದೆಯನ್ನು ಆ ತನಕ ಆಂಗ್ಲೆಯರೇ ಅಲಂಕರಿಸಿದುದ್ದು. ಪಾಶ್ಚಾತ್ಯರ ವೇಷ, ಭೂಷಣ ಡೆಲುಗಳಿಗೆ ಮಾರುಹೋಗಿದ್ದ ಅನೇಕ ಕೊಡವರಿಗೆ ಸರಳ ಸುಸಂಸ್ಕೃತರಾದ ಪಂಜೆಯವರು ಸಾಕಷ್ಟು 'ನಾಗರಿಕರಾಗಿ' ಕಾಣಲಿಲ್ಲ. ಅಸಹಕಾರ, ಅನಾದರಗಳು ಅವರನ್ನು ಕಾಡಿಸಿತು ಇದನ್ನೆಲ್ಲ ಲೆಕ್ಕಿಸದ ತನ್ನ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಿದರು. ಕೊಡವರ ಜಾನಪದ ಗೀತಗಳನ್ನು, ಅವರ ಇತಿಹಾಸ ಸಂಸ್ಕೃತಿಗಳ, ಅಲ್ಲಿನ ನಿಸರ್ಗದ ಸೊಗಸನ್ನು ತಿಳಿದು ಹುತ್ತರಿಹಾಡನ್ನು ರಚಿಸಿದರು. ಪಂಜೆಯ ಸ್ಥಾನಕ್ಕೆ ಬರಬೇಕೆಂಬ ಮಹತ್ವಾಕಾಂಕ್ಷೆಯಿದ್ದವರು ಸುಳ್ಳು ಆರೋಪಗಳನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿದಾಗ ಪಂಜೆಯವರ ಗೌರವವನ್ನು ಅಲಕ್ಷಿಸಿದ ಜಿಲ್ಲಾಧಿಕಾರಿಗಳ ವರ್ತನೆಗೆ ನೊಂದು ಪಂಜೆಯವರು ಅವಧಿಪೂರ್ವದಲ್ಲೇ ನಿವೃತ್ತಿ ಮಾಡಿಸಿ ಮಂಗಳೂರಲ್ಲಿ ನೆಲಸಿದರು.

ಶ್ರೀ ತಾತಾಚಾರ್ಯರ ಅಧ್ಯಕ್ಷತೆಯಲ್ಲಿ 1927ರ ಮೇ ತಿಂಗಳಲ್ಲಿ ಮಂಗಳೂರಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಕಾರಣಪುರಷರು ಪಂಜೆಯವರೇ. ಆ ಸಂದರ್ಭದಲ್ಲಿ ಪ್ರಕಟವಾದ 'ಪಂಚಕಜ್ಜಾಯ' ಸಂಪುಟವು ಮೇಲ್ತರದ್ದಾಗಿದೆ. ಪಂಜೆಯವರು ಬರೆದ ಸಂಶೋಧನಾತ್ಮಕ ಲೇಖನವಾದ 'ಮೂಡುಬಿದಿರೆಯ ಹೊಸ ಬಸದಿಯ ಶಿಲಾಶಾಸನಗಳು', ಈ ಸಂಪುಟದಲ್ಲಿದೆ. ಅಂತೆಯೇ 'ಬಿಳಗಿಯ ಕೆಲವು ಶಾಸನಗಳು'

ಎಂಬ ಬರಹವು ಪಂಜೆಯವರ ವಿದ್ವತ್ತು, ಸಂಶೋಧನಾ ಸಾಮರ್ಥ್ಯಗಳನ್ನು ವ್ಯಕ್ತಪಡಿಸುತ್ತದೆ. ಶಿಕ್ಷಣದ ಬಗ್ಗೆ ಪಂಜೆಯವರ ಕೆಲವು ವಿಚಾರಗಳು 'ಸರ್ವಜ್ಞನ ಓನಾಮ ಪದ್ಧತಿಯು' ಎಂಬ ಲೇಖದಲ್ಲಿ ಕಾಣಬಹುದು. ಇದೂ ಚೆನ್ನಾದ ಬರಹವಾಗಿದೆ.

ವೃತ್ತಿಯಿಂದ ನಿವೃತ್ತರಾದ ಬಳಿಕ ಪಂಜೆಯವರು ಮಂಗಳೂರಲ್ಲಿ ನೆಲಸಿದರು ಪಂಜೆಯ ಸಮಾಜದ ಹಿರಿಯರು ಬೆಂಗಳೂರಲ್ಲಿ ನೆಲಸುವ ಕ್ರಮವಿದ್ದ ದಿನಗಳು. ಊರಮೇಲಿನ ಮೋಹದಿಂದ ಇವರು ಮಾತ್ರ ದಕ್ಷಿಣಕನ್ನಡ ಜಿಲ್ಲೆಯ ಬಿಟ್ಟು ಹೋಗಲು ಸಿದ್ಧರಿರಲಿಲ್ಲ. ಈ ಕಾಲದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ದುಡಿದರು. ಮದರಾಸು, ಮೈಸೂರು ವಿಶ್ವ ವಿದ್ಯಾಲಯಗಳ ಕನ್ನಡ ವಿಭಾಗಗಳಲ್ಲಿ ಕನ್ನಡದ ಸಲಹೆಗಾರರಾಗಿದ್ದರು. 1934ರ ರಾಯಚೂರು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯು ಪಂಜೆಯವರನ್ನು ಹುಡುಕಿಕೊಂಡು ಬಂದಾಗ ಡಿವಿಜಿಯಂತಹ ಗೆಳೆಯರ ಬಲವಂತಕ್ಕಾಗಿ ಒಪ್ಪಿಕೊಂಡರು. ಈ ಮೊದಲು ಈ ಗೌರವಕ್ಕೆ ಸೂಚಿತವಾದಾಗ ಅವರು ವಿನಯದಿಂದ ನಿರಾಕರಿಸಿದ್ದರು. ಕನ್ನಡದ ಸರ್ವಾಂಗೀಣ ಏಳಿಗೆಯನ್ನು ಮಾಡುವ ವಿಧಾನಗಳೇ ಅವರ ಅಧ್ಯಕ್ಷಭಾಷಣದ ಮುಖ್ಯವಿಷಯವಾಗಿತ್ತು. ಕನ್ನಡ ನುಡಿಯ ಸೊಗಸನ್ನು ಎತ್ತಿ ಹೇಳಿ, ಈ ನುಡಿಯ ಧ್ವನಿಶಕ್ತಿಯ ಹೆಚ್ಚಳವನ್ನು ವಿಶದಪಡಿಸಿದರು. ಕನ್ನಡ ಭಾಷೆಯ ಸೇವೆಗಾಗಿ ರೆಡಿಯೋ, ಗ್ರಾಮಫೋನ್, ಬೆರಳಚ್ಚುಗಳ (Typewriter) ಬಳಕೆಯಲ್ಲಿದೆ. ಲಿಪಿ ಸುಧಾರಣೆಯ ಬಗ್ಗೆ ಸಲಹೆಗಳನ್ನಿತ್ತರು. ಕಾವ್ಯಮಾರ್ಗದಲ್ಲಾದ ಹೊಸಪ್ರಯೋಗಗಳನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸಿದರು: ಕನ್ನಡನುಡಿಯ ಮೇಲಿನ ತಮ್ಮ ಪ್ರೀತಿ, ಭಕ್ತಿ, ಕೃತಜ್ಞತೆಗಳನ್ನು

ಸೂಚಿಸುವ ಸಂದರ್ಭದಲ್ಲಿ ಪಂಜೆಯವರು ಭಾವಾವೇಶಕ್ಕೆ ಒಳಗಾದರು. ಅದನ್ನು ಕಂಡ ಡಿವಿಜಿಯವರು ಬರೆದ ಚಿತ್ರವು ಹೀಗಿದೆ ಇನ್ನೊಂದು ದೃಶ್ಯವು ಕರುಣಾಸ್ಪದವಾದುದು. ಸಮ್ಮೇಳನದ ಉಪಸಂಹಾರ ಭಾಷಣವನ್ನು ಮಾಡಲು ಎದ್ದು ನಿಂತರು ಪಂಜೆಯವರು. ಅವರು ಸಭೆಯಲ್ಲಿ ಕಂಡ ಉತ್ಸಾಹದಿಂದಲೂ ಕೇಳಿದ ಉಪನ್ಯಾಸ, ಚರ್ಚೆಗಳಿಂದಲೂ ಅವರ ಹೃದಯ ಕಾವೇರಿತ್ತು. ಕಡೆಗೆ ಪಂಜೆಯವರ ಕಣ್ಣಲ್ಲಿ ಹನಿಗೂಡಿತು. ಧ್ವನಿ ಗದ್ಗದವಾಯಿತು. ಕಡೆಗೆ ಅವರು – "ನನಗೀಗ ಇರುವುದು ಒಂದೇ ಆಶೆ – ನನ್ನ ಕಡೆಯ ಗಳಿಗೆಯಲ್ಲಿ ನನ್ನ ನಾಲಗೆ 'ಕೃಷ್ಣ. ಕೃಷ್ಣ' ಎಂದು ನುಡಿಯುವಂತೆಯೇ 'ಕನ್ನಡ, ಕನ್ನಡ' ಎಂದು ನುಡಿಯುತ್ತಿರಲಿ" ಎಂದರು. ನಾವೆಲ್ಲ ಚೇತರಿಸಲು ಎರಡು ಗಳಿಗೆ ಬೇಕಾಯಿತು. ಆ ಅನುಭವವನ್ನು ಪಟ್ಟವರು ಮರೆಯಲಾರದು."

ಸಾಹಿತ್ಯ ಸಮ್ಮೇಳನದ ಬಳಿಕ ಪಂಜೆಯವರು ಸ್ವಲ್ಪ ಕಾಲ ತಾತಾನಗರದಲ್ಲಿ, ಆ ಬಳಿಕ ಹೈದರಾಬಾದಿನಲ್ಲಿ ಇದ್ದರು. ಪಂಜೆಯವರ ಅಚ್ಚುಮೆಚ್ಚಿನ ಕವಿಯಾದ ಕುಮಾರವ್ಯಾಸನ ಭಾರತವನ್ನು ಸಂಪಾದಿಸುವ ಕೆಲಸವನ್ನು ಮೈಸೂರು ವಿಶ್ವ ವಿದ್ಯಾಲಯವು ಅವರಿಗೊಪ್ಪಿಸಿತ್ತು. ಆದರೆ 1937ರ ಅಕ್ಟೋಬರದಲ್ಲಿ ನಿಮೋನಿಯಾ ರೂಪದಲ್ಲಿ ಕಾಲನ ಕರೆ ಬಂದಾಗ ಈ ಪ್ರಪಂಚವನ್ನು ಬಿಟ್ಟು ತೆರಳಲೇ ಬೇಕಾಯಿತು. ತನ್ನ ಕೊನೆಯ ಗಳಿಗೆಯಲ್ಲಿ ಅವರು ಶಾಂತಚಿತ್ತರಾಗಿದ್ದರಂತೆ. ತನ್ನ ಆತ್ಮೀಯರನ್ನೆಲ್ಲಾ ನೆನಸಿ, ತನ್ನ ವಂದನೆಗಳನ್ನು ತಿಳಿಸುವಂತೆ ಅಪೇಕ್ಷಿಸಿದರು. ಸೇವಕಸ್ಥಾನದಲ್ಲಿದ್ದರೂ ತಮ್ಮ ಒಡನಾಡಿಗಳಾಗಿದ್ದ ರಾಮನಾಯಕ ಮತ್ತು ಬಾಬ ಪೈಯವರನ್ನೂ

ನೆನಸಿದ ಹೃದಯ ವೈಶಾಲ್ಯವನ್ನು ನಾವು ಗಮನಿಸಬೇಕು. 'ಅವರ ಕೊನೆಯಾಸೆಯೆಂಬುದು ಕರ್ನಾಟಕ ಏಕೀಕರಣವಾಗಿತ್ತು. ಆ ಕೊನೆಯ ಗಳಿಗೆಯಲ್ಲಿ ಕುಮಾರ ವ್ಯಾಸನ ಪ್ರಿಯ ನುಡಿಗಳನ್ನು ಉಸುರುತ್ತ, ತಮ್ಮ ಭೌತಿಕ ಪ್ರಪಂಚವನ್ನಗಲಿ, ತಮ್ಮ ಹಿರಿಯರ, ತಮ್ಮ ಸೃಷ್ಟಿಕರ್ತನ ಲೋಕಕ್ಕೆ ಶಾಂತವಾಗಿ ಸರಿದರು. ಅಂದಿಗೆ ಒಂದು ಹಿರಿಯರ ಬಾಳು ಕೊನೆಗೊಂಡಿತು; ದಿ। ಗೋವಿಂದ ಪೈಯವರಂದಂತೆ 'ತುಳುನಾಡಿನ ಕನ್ನಡ ಸಾಹಿತ್ಯದ ವಿಗಡಸ್ತಂಭದೀಪವಾರಿತು, ಬೆಳಕು ಬೆಳಕಿಗೆ ಸೇರಿತು.'

ಪಂಜೆಯವರ ಬಾಳಪಯಣದ ಹೆಜ್ಜೆಗಳನ್ನು ವೀಕ್ಷಿಸುತ್ತಿದ್ದ ನಮಗೆ ಅವರು ಹೊರನೋಟಕ್ಕೆ ಎಂತಿದ್ದರೆಂದು ತಿಳಿಯುವ ಆಸಕ್ತಿಯಿರುವುದು ಸಹಜ. ಅವರಿಗೆ ನಿಕಟರಾಗಿದ್ದ ಹಲಮಹನೀಯರು ಈ ರೀತಿಯಾಗಿ ಚಿತ್ರಿಸಿದ್ದಾರೆ. 'ಸರಿ ಸುಮಾರು 5 ಅಡಿ 7–8 ಇ. ಎತ್ತರವಿದ್ದ ಈ ಶ್ರೇಷ್ಠವ್ಯಕ್ತಿಯು ನೋಟಕ್ಕೆ ತೆಳ್ಳಗೆ, ಅವರ ಮೈ ಬಣ್ಣ ಬೆಳ್ಳಗೆ, ಮುಖ ನಸು ಕೆಂಪು ಮತ್ತು ಅಗಲವಾದ ಹಣೆ, ತಲೆಯು ನಿಕೇಶ. ಅವರ ಮೀಸೆಯೂ ಹುಬ್ಬುಗಳೂ ದಟ್ಟವಾಗಿದ್ದವು "1"....ಅವರ ಉದ್ದವಾದ ದೇಹ, ನಸು ಬಾಗಿದ ನಡೆ, ಗಂಭೀರವಾದ ಮುಖಭಾವ, ಜೋಲು ನೆರಿಬಿಟ್ಟ ವೇಷ್ಟಿ, ಕಪ್ಪಿನ ಉದ್ದಂಗಿ, ಜರಿ ರುಮಾಲು ..."2" ಕಂಕುಳಲ್ಲಿ ಕೊಡೆ, ನಡೆಯುವಾಗಲೂ ನೆಲದಲ್ಲಿ ನಟ್ಟದೃಷ್ಟಿ, ಮನಸ್ಸಿನಲ್ಲೇ ಮಾತುಕತೆ, ಅದೇ

---

1 1925ರ ಸುಮಾರಿನಲ್ಲಿ ಶ್ರೀ ಬಿ. ಹರಿ ಶೆಣೈ, ಪಂಜೆಯವರ ನೆನಪಿಗಾಗಿ ಪು. ೩೫.

2 ಶ್ರೀ ಉಗ್ರಾಣ ಮಂಗೇಶರಾಯರು, ಪಂಜೆಯವರ ನೆನಪಿಗಾಗಿ ಪು. ೨೭.

ಯಾವಂದಿನ ಜೂ(ಟನಡೆ" 3 ಈ "ಹುಲುಸಾದ ಮೆದುಳು, ನಿರಾಳವಾದ ನುಡಿತ, ಆಳವಾದ ಭಾವನೆ, ವಿಶಾಲವಾದ ಕಾಣಿಕೆ, ಹದನಾದ ಚಕ್ಕುಲಿಕೆ–ಇವನ್ನು ಎಲ್ಲಿ ತಾನೆ ನಾವಿನ್ನು ಒಮ್ಮೆಯಾಗಿ ಕಾಣಬಹುದು?" 4

ಪಂಜೆಯವರ ಮನಸ್ಸು ಚುರುಕು. ಅಂತೆಯೇ ನಡೆ. ಎಲ್ಲೂ ಸುಮ್ಮಗೆ ಕೂರುವ ಆಸಾಮಿಯಲ್ಲ. ಶತಪಥ ಹಾಕುತ್ತಾ ಇದ್ದವರು. ಕಾಫಿಯ ಪರಮಭಕ್ತರು. ಸಿಗರೇಟು ಸೇದುವವರೂ ಆಗಿದ್ದರಂತೆ; ವೇಷಭೂಷಣ ಸರಳವಾದ ಶುದ್ಧ ಸ್ವದೇಶಿ; ಸದಾ ಹಾಡುತ್ತಾ ಇರಬೇಕು. ಕುಮಾರ ವ್ಯಾಸನಿಂದ ಯಾ ತುಳು ಪಾಡ್ದನದಿಂದ ಸಾಲುಗಳನ್ನೆತ್ತಿಕೊಂಡು ರಾಗವಾಗಿ ಹಾಡುತ್ತಾ ಅದರ ನಾದದ ಸವಿಯಲ್ಲಿ ತಲೆತೂಗುತ್ತಾ ಇರಬೇಕು. ನಕ್ಷತ್ರ ವೀಕ್ಷಣೆಯಲ್ಲಿ ಸಂತೋಷಪಡುವವರು. ತಾನು ಮೆಚ್ಚಿದನ್ನೇ ಉತ್ಸಾಹದಿಂದ, ಭಾವಪೂರ್ಣವಾಗಿ ಸಾಭಿನಯವಾಗಿ ತಿಳಿಸುವುದೂ ಪಂಜೆಯವರ ವೈಶಿಷ್ಟ್ಯ. ಯಾವಾಗ ಬೇಕೆಂದರೆ ಆಗ ಸರಸವಾದ ಹಾಡುಗಳನ್ನು ರಚಿಸುವ ಹವ್ಯಾಸ. ಮನೆಯ ಪಕ್ಕದ ಡಾಕ್ಟರರ ಬರುವ ರೀತಿಯನ್ನೂ ಹಾಡಿಯೇ ವಿನೋದಿಸಬೇಕು.

,,ಜೋಡು ಕುದುರೆ ಬಂಡಿ ಮೇಲೆ
ನೋಡು ಶಿವರಾವ್ ಬರುತ್ತಾರೆ."

ಪಂಜೆಯವರೊಂದಿಗೆ ಮಾತಾಡುವುದೆಂದರೆ 'ಅದೊಂದು ಚಿಕ್ಕ ಸಮಾರಾಧನೆ. ಮಾತಿವೆ, ಕಥೆಯಿದೆ, ಕಟಕಿಯಿದೆ, ಗಾದೆಯಿದೆ, ಗಾನವಿದೆ, ಗೇಲಿಯಿದೆ, ಎಲ್ಲಾ ವಿಧದ ಭಕ್ಷ್ಯ

3 ದಿ। ಗೋವಿಂದ ಪೈಯವರು, ಪಂಜೆಯರ ನೆನಪಿಗಾಗಿ ಪು. ೧೦೭
4 ,, ,, ಪು ೭

ಭೋಜ್ಯಗಳಿವೆ ಅಲ್ಲಿ. ನನ್ನ ಆ ಚಿಕ್ಕಂದಿನಲ್ಲಿ ಅದನ್ನು ಬಿಟ್ಟರೆ ನನಗೆ ಬೇರೆ ಪ್ರಸ್ತವಿದ್ದಿಲ್ಲ, ಹಬ್ಬವಿದ್ದಿಲ್ಲ"* ಕರ್ಕಶ ವಾದುದನ್ನು ನೋಡಲು ಪಂಜೆಯವರಿಗೆ ಸಾಧ್ಯವಾಗುತ್ತಿಲ್ಲ. ತಾತನಗರದಲ್ಲಿ ಹಲವು ತಿಂಗಳು ವಾಸಿಸಿದ್ದರೂ ಉಕ್ಕಿನ ಕಾರ್ಖಾನೆಯ ಒಳಕ್ಕೆ ಹೋದವರೇ ಅಲ್ಲ. ' ನಾನು ಅವನ್ನು ನೋಡಲೇ ಇಲ್ಲ. ಅಂಥದೆಲ್ಲ ನನ್ನಿಂದ ನೋಡಲಿಕೆ ಆಗದು" ಎಂದು ಶ್ರೀ ಶಿವರಾಮ ಕಾರಂತರಲ್ಲಿ ಪಂಜೆಯವರು ಅಂದಿದ್ದರು. •ತೂಕಡಿಕೆಯನ್ನು ಕಳೆಯದೇಕೆ ಕುಳಿತಿಹೆ ಗೆಳೆಯ' ಎನ್ನುವ ಉಗ್ರ ರಾಷ್ಟ್ರಾಭಿಮಾನದ ರಣಗೀತವನ್ನು ರಚಿಸಿದ ಪಂಜೆಯವರು ಸ್ವಭಾವದಲ್ಲಿ ಭೀರುಗಳಾಗಿದ್ದರಂತೆ. •ಬೀದಿಯಲ್ಲಿ ಹೋಗುವಾಗ ಬಿರ್ರನೆ ಒಂದು ಬಂಡಿ ಬಂತೆಂದರೆ ಮಿಟಿ ಮಿಟಿ ನೋಡುತ್ತ ಅಲ್ಲೇ ಬೆಪ್ಪಾಗುವ, ಭೋಂಕನೆ ಒಂದು ಮೋಟಾರು ಕಾರು ಅಡ್ಡ ಬಂತೆಂದರೆ ತಲ್ಲಣಿಸಿ ಕಾಲು ಗೊಂದ ಳಿಸುವ' ವ್ಯಕ್ತಿಯಾಗಿದ್ದರು.*

ತಮ್ಮವರನ್ನು, ಮಕ್ಕಳನ್ನು ತುಂಬು ಹೃದಯದಿಂದ ಪ್ರೀತಿಸುವವರಾಗಿದ್ದರು ಪಂಜೆಯವರು. ಎಲ್ಲ ಮಕ್ಕಳಿಗೆ ಉನ್ನತ ಶಿಕ್ಷಣಕೊಡಿಸಿದ್ದರು. ಹಾಗಾಗಿ ಪುತ್ರರು ಹಿರಿಯ ಸ್ಥಾನ ಗಳನ್ನು ಅಲಂಕರಿಸಿ ಯೋಗ್ಯರಾಗಿ ಮೆರೆದಿದ್ದಾರೆ.

ಪಂಜೆಯವರು ನಿತ್ಯ ವಿನೋದಿಗಳಾಗಿದ್ದರು. ಕಿರು ಹಾಸ್ಯ ಅವರ ಜೀವನದ ತಿರುಳಾಗಿದ್ದಿತು. ಡಿವಿಜಿಯವರು ಪಂಜೆಯವರು ಸೃಷ್ಟಿಸಿದ ಹಲವು ರಸಪ್ರಸಂಗಗಳನ್ನು ಉಲ್ಲೇ ಖಿಸಿದ್ದಾರೆ, ಅವುಗಳಲ್ಲಿ ಬೆನಗಲ್ ರಾಮರಾಯರನ್ನು ರೇಗಿ

---

*ದಿ| ಗೋವಿಂದ ಪೈ, ಪಂಜೆಯವರ ನೆನಪಿಗಾಗಿ, ಪು. ೯೮.

* ದಿ| ಗೋವಿಂದ ಪೈ, ಪಂಜೆಯವರ ನೆನಪಿಗಾಗಿ ಪು. ೧೦೩.

ಸಿದ ಪ್ರಸಂಗ ಮತ್ತು ಕುಟುಂಬ ರಹಿತವಾಗಿ ಚೇಂಜಿಗಾಗಿ ಬಂದಿದ್ದೇನೆನ್ನುವ ಮಾತಿನ ಧ್ವನಿಯಲ್ಲಿರುವ ರಸಿಕ ಪ್ರವೃತ್ತಿಯನ್ನು ನಾವು ಗಮನಿಸಲೇ ಬೇಕು.

ಪಂಜೆಯವರ ಬಗ್ಗೆ ಅವರ ಸಹೋದ್ಯೋಗಿಯಾಗಿದ್ದ ಶ್ರೀ ಬಿ. ಹರಿ ಶೆಣೈಯವರು ಹೇಳಿದ ಮಾತುಗಳು ತಿಳಿಯತಕ್ಕವು. ‹‹ಬಡವ, ಬಲ್ಲಿದ, ಸಿರಿವಂತ, ಜ್ಞಾನಿ, ಅಜ್ಞಾನಿ, ಪ್ರೌಢ, ಬಾಲಕ ಇತ್ಯಾದಿ ಜನರಲ್ಲಿ ಅವರಿಗಿದ್ದ ಭ್ರಾತೃಭಾವವೂ ಸರಿಸಮಾನತೆಯೂ, ಪರೀಕ್ಷಕರಿಗೆ ಸ್ಪಷ್ಟವಾಗಿ ಕಾಣಬರುತ್ತಿತ್ತು. ಎಲ್ಲರಲ್ಲೂ ಸಭ್ಯವರ್ತನೆ...ಮೂರು ನಾಲ್ಕು ವರ್ಷಪ್ರಾಯದ ಮಕ್ಕಳಲ್ಲೂ ನಗುತ್ತಾ, ಮಾತಾಡಿ ಅವರ ಮನಸ್ಸಿನ ಪ್ರವೃತ್ತಿಯನ್ನು ತಿಳಕೊಳ್ಳುವುದೆಂದರೆ ಅವರಿಗೆ ಇಷ್ಟ...*"

ಪಂಜೆಯವರ ಸುಪುತ್ರಿಯವರು ತಮ್ಮ ತಂದೆಯವರ ವ್ಯಕ್ತಿತ್ವದಲ್ಲಿದ್ದ ಕೆಲವು ಮಹತ್ವದಂಶಗಳನ್ನು ತಿಳಿಸಿದ್ದಾರೆ. "ನಮ್ಮ ತಂದೆ ನನಗೆ ಹೇಳಿಕೊಟ್ಟ ಅತಿ ಮಹತ್ವದ ಪಾಠವೇನೆಂದು ಕೇಳಿದರೆ - ಅದು ಬಾಳುವ ವಿಚಾರವಲ್ಲೇನೆ. ಆಗಾಗ ಉಪದೇಶ, ಉಪನ್ಯಾಸಗಳಿಂದ ಕಲಿಸ ಪಾಠ ಅದಲ್ಲ. ತನ್ನ ನಡವಳಿಕೆಯಿಂದ ಕಲಿತ ಪಾಠವದು. ಅವರಿಗೆ ಕಪಟ ರಹಿತವಾದ, ನಿಷ್ಕಳಂಕವಾದ ನಡತೆಯಲ್ಲಿ ಅಗಾಧವಾದ ಮಮತೆಯಿತ್ತು ಆದುದರಿಂದಲೇ ಬಾಹ್ಯಾಡಂಬರದ ವಿಚಾರದಲ್ಲಿ, ಉಡುಗೆ ತೊಡುಗೆ ಅಲಂಕಾರಗಳ ಮೆರುಗಿನ ಮೇಲೆ ತುಂಬ ತಿರಸ್ಕಾರವಿತ್ತು. ಅವರ ಜೀವನ ರೀತಿಗಳಂತೂ ತೀರ ಸರಳವಾಗಿದ್ದವು; ಅವರಂತೆ ನಾವಾದರೂ ಇರಬೇಕೆಂದು ಬಯಸುತಿದ್ದರು. ಆದುದರಿಂದಲೇನೆ ಅವರಿಗೆ ವಕ್ರಮಾರ್ಗ, ಒಳಸಂಚುಗಳೆಂದರೆ ಅಸಹ್ಯ

*ಪಂಜೆಯವರ ನೆನಪಿಗಾಗಿ, ಪು. ೩೯

ವಾಗುತಿತ್ತು....... ಸುಳ್ಳು, ವಂಚನೆ ಅವರಿಗಾಗದೇ ಆಗದು. ಆತ್ಮಪ್ರತಿಷ್ಠೆ, ಪುಸ್ತಕಪಾಂಡಿತ್ಯ ಕೆಲಸಕ್ಕೆ ಮೈಗಳ್ಳತನವೆಂಬುವೂ ಅವರಿಗೆ ಸಲ್ಲವು. ಇಂಥ ದುರ್ಗುಣಗಳು ತಮ್ಮ ಮನೆಯ ಮಕ್ಕಳಲ್ಲಿ ಬಾರದಂತೆ ಎಚ್ಚರ ವಹಿಸುತ್ತಿದ್ದರು. ಅವರು ಅಂದು ಕಲಿಸಿದ ಪಾಠ ಇಂದು ನಮ್ಮ ಜೀವನಕ್ಕೆ ವಿಶೇಷ ನೆರವಾಗಿದೆ. ಹಣ, ಸೇವಕರು ಸುಲಭ ಸಾಧ್ಯರಲ್ಲ. ಅವಿಲ್ಲದೆ ಬದುಕನ್ನು ಸರಿಹೋಗುವಂತೆ ಮಾಡುವ ತಾಳ್ಮೆ, ನೋಟಗಳನ್ನೇ ಅವರು ನಮಗೆ ಕಲಿಸಿದರೆಂದೇ ಉಪಕಾರವಾಯಿತು"*

ಪಂಜೆಯವರ ಭಾಷಾಸೇವೆಯಲ್ಲಿ ಹೆಸರಿಸಬೇಕಾದ ಕಾರ್ಯಗಳು ಇನ್ನೂ ಇವೆ, ಇಂಗ್ಲಿಷ್-ಕನ್ನಡ ನಿಘಂಟನ್ನು ಸಂಕಲಿಸಿ, ಬಾಸೆಲ್ ಮಿಶನ್‌ನವರಿಂದ ಪ್ರಕಟಿಸಿದವರು ಅವರೇ. ಕೇಶಿರಾಜನ ಶಬ್ದಮಣಿದರ್ಪಣದ ಮೂರನೆಯ ಆವೃತ್ತಿಯನ್ನು ಸಮರ್ಥವಾಗಿ ಸಂಪಾದಿಸಿದ್ದಾರೆ. ಈ ಬಗ್ಗೆ ದಿ। ಗೋವಿಂದ ಪೈಯವರು ತುಂಬಾ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ, 'ಸ್ಥಳನಾಮ', 'ಪದಾರ್ಥಗಳೇನು' ಲೇಖಗಳು ಪಂಜೆಯವರ ಅಸಾಧಾರಣ ಭಾಷಾಜ್ಞಾನ ಮತ್ತು ಲೋಕಜ್ಞಾನಗಳನ್ನು ಸಾರುತ್ತಿವೆ. ಪಂಜೆಯವರ ಗದ್ಯ ಶೈಲಿಯು ತನ್ನತನದಿಂದ ಕೂಡಿದ ರುಚಿಯಾದ ಪಾಕ. ಆಡು ನುಡಿಯ ಸರಳ ಪದಗಳನ್ನು ಉದ್ದೇಶಪೂರ್ವಕವಾಗಿ ಬಳಸುತ್ತಿದ್ದರು. ಕರೆ ನಾಡಿನ ವಿಶಿಷ್ಟ ಪದ ಮತ್ತು ತುಳುವಿನ ಸೊಗಸಾದ ಪದಗಳಿಂದ ಕನ್ನಡದ ಬೆಡಗನ್ನು ವೃದ್ಧಿಸುತ್ತಿದ್ದರು. ಆ ಕಾರ್ಯವನ್ನು ಅವರ ಶಿಷ್ಯರಾದ ದಿ। ಗೋವಿಂದ ಪೈಯವರು ಆ ಮೇಲೆ ಮುಂದುವರಿಸಿದವರು. ಪೈಯವರ ವೈಶಿಷ್ಟ್ಯವಾದ 'ಇಸು'

---

*ಪಂಜೆಯವರ ನೆನಪಿಗಾಗಿ ಪು. ೫೦.

ಪ್ರತ್ಯಯವನ್ನು ಹಚ್ಚಿ ಕ್ರಿಯಾಪದಗಳನ್ನು ರಚಿಸುವ ಸಂಪ್ರ
ದಾಯದ ಮೂಲಪುರುಷರು ಪಂಜೆಯವರೇ. 1932ರ
'ಮೋಟರ್ ಡ್ರೈವ್ ಮಾಡಿದನು' ಎಂಬುದನ್ನು 'ಮೋಟಾ
ಸಿದ'ನೆಂದು ಹೇಳಬಹುದೆಂದು ಸೂಚಿಸಿದ್ದರು.

ಹೊಸಸಾಹಿತಿಗಳನ್ನು ಪ್ರೋತ್ಸಾಹಿಸುವ ಗುಣ ಪಂ
ಯವರಲ್ಲಿತ್ತು. ನಿರ್ಮತ್ಸರದಿಂದ ಅನ್ಯರ ಕೃತಿಗಳನ್ನು ಮೆಚ್ಚಿ
ಹಾಡಿ ಓದಿ ತೋರಿಸುತ್ತಿದ್ದರು. ದಿ। ಗೋವಿಂದಪೈಯವರ
ಪ್ರಾಸಬಿಟ್ಟುದನ್ನು ಮೆಚ್ಚದ ಪಂಜೆಯವರು ಆ ಬಳಿಕ ಮೆಚ
ಕೊಂಡರು. ತನ್ನ ತಪ್ಪು ಗ್ರಹಿಕೆಯನ್ನು ಸಾರ್ವಜನಿಕವಾ
ಒಪ್ಪಿಕೊಂಡರು. ಸಾಹಿತ್ಯದಲ್ಲಿ ಹೊಸ ಪ್ರಯೋಗಗಳು ಇ
ಬೇಕೆಂಬುದು ಅವರ ಅಭಿಮತವಾಗಿತ್ತು.

ಹಳ್ಳಿಯ ಅಧ್ಯಾಪಕರನ್ನು ಪಂಜೆಯವರು ಪ್ರೀತಿಸಿದಷ
ಯಾರೂ ಪ್ರೀತಿಸಿದಂತಿಲ್ಲ. ತಾವು ನಿವೃತ್ತರಾದ ಒಳಿಕವ
ಆಸಕ್ತಿವಹಿಸುತ್ತಿದ್ದರು. 1932ರಲ್ಲಿ ಶ್ರೀ ಶಿವರಾಮ ಕಾರಂ
ರಿಂದ ಶಿಕ್ಷಣ ಸಪ್ತಾಹವನ್ನು ಮಂಗಳೂರಲ್ಲಿ ಜರಗಿಸಿದರು
ಅದರಿಂದಾದ 500 ರೂಪಾಯಿ ನಷ್ಟವನ್ನು ತಾನೇ ತುಂಬಿ
'ನಾನು ಡಿಪ್ಯೂಟಿ ಇನ್ಸ್‌ಪೆಕ್ಟರನಾಗಿದ್ದಾಗ ಈ ಹಳ್ಳಿಯ ಶಾಲೆ
ಮಾಸ್ತರರು ನನ್ನ ಸಲುವಾಗಿ ಎಷ್ಟೆಲ್ಲ ಮಾಡಿಲ್ಲ. ನಾನು ಈ
ಕೊಡುತ್ತಿರುವುದು ತೀರ ಅಲ್ಪ. ಅವರು ನನಗೆ ತೋರಿ
ಮಮತೆಗೆ ಸಮನಾದ ಋಣವನ್ನು ನಾನೆಂದಾದರೂ ಸಲ್ಲಿ
ಬಲ್ಲೇನೆ?' ಅಂದರಂತೆ.

ವರಕವಿ ಕುವೆಂಪು ಪಂಜೆಯವರ ಕುರಿತು ಹಾಡಿ
ಹಾಡಿನ ಸೊಲ್ಲು ಸರಿಯಾದುದು, ಸುಂದರವಾದುದು.

'ಕಟ್ಟಿದರೆ ಕಬ್ಬಾಗಿ. ಹಿಂಡಿದರೆ ಜೇನಾಗಿ
ನಿಮ್ಮುತ್ತಮಿಕೆಯನೆ ಮರೆದಿರಯ್ಯಾ.'

ಪಂಜೆಯವರ ವ್ಯಕ್ತಿ ಚೇತನಕ್ಕೆ ಮೂರು ಪ್ರಧಾನ ಅಂಗಗಳಿರುವುದನ್ನು ನಾವು ಗುರುತಿಸಬಹುದು. ಅವರು ಎಳೆಯರಿಗೆ ಪಾಠ ಹೇಳಲೆಂದೇ ಹುಟ್ಟಿದವರು; ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಪ್ರಥಮಕೃಷಿಯನ್ನು ಮಾಡಿದ ಕಾವ್ಯ ಹೃದಯಿಯಾಗಿದ್ದವರು, ಸುಕೋಮಲವಾದ ವ್ಯಕ್ತಿತ್ವದಿಂದ ಬಾಳನ್ನೇ ಒಂದು ಸುಂದರವಾದ ಕಲಾಕೃತಿಯನ್ನಾಗಿ ಮಾಡಿದವರು. ಪಂಜೆಯವರ ಕಾಯಕ, ಕಲೆಗಳು ಶ್ರೇಷ್ಠವಾಗಿದ್ದವು. ಅಲ್ಲದೆ ಅವರು ನಡೆಸಿದ ಸುಮಧುರ ಬಾಳ್ವೆಯು ಇನ್ನೂ ಶ್ರೇಷ್ಠವಾಗಿತ್ತು. ಬಾಳನ್ನೇ ದಿವ್ಯಕಲೆಯೆಂದು ತಿಳಿದು, ನಾಡಿಗಾಗಿ ಚಂದನದಂತೆ ತಮನ್ನೆತೇದ ಪಂಜೆಯವರ ಪರಿಶುದ್ಧ ಜೀವನದ ನೆನಪು ಇಂದಿನವರಾದ ನಮ್ಮಲ್ಲಿ ಸೊಗಸಾದುದನ್ನು, ನಿರ್ಮಲವಾದುದನ್ನು ಕಾಣುವ, ಅಳವಡಿಸಿಕೊಳ್ಳುವ ಸತ್ಪ್ರೇರಣೆಯಾಗಲಿ.

ಪಂಜೆಯವರ ಕುರಿತು

ಶಿವರಾಮ ಕಾರಂತ ಮತ್ತು ಇತರರು: 'ಶ್ರೀ ಪಂಜೆಯವರ ನೆನಪಿಗಾಗಿ' ಪುತ್ತೂರು. ಹರ್ಷಮುದ್ರಣ.

ಬಿ. ಶಂಕರ ಭಟ್ಟ: ಕನ್ನಡಕ್ಕಾಗಿ ದುಡಿದವರು ಮಂಗಳೂರು ಕನ್ನಡ ಪ್ರಪಂಚ ಪ್ರಕಾಶನ, 1957

ಎಸ್. ಅನಂತನಾರಾಯಣ: ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, 1962 ಮೈಸೂರು ಗಂಗಾತರಂಗ.

ಕೀರ್ತಿನಾಥ ಕುರ್ತಕೋಟಿ: ಯುಗಧರ್ಮ ಹಾಗೂ ಸಾಹಿತ್ಯ ದರ್ಶನ 1962, ಧಾರವಾಡ. ಮನೋಹರ ಗ್ರಂಥಮಾಲಾ.

ನವೋದಯ

ಪ್ರಚಾರ ಪುಸ್ತಕ ಮಾಲೆ

ಅಚ್ಚಾಗಿದುವು:

ಕಲುವಿದ ಕೃಷ್ಣ ಹೆಬ್ಬಾರರು
ಬೇಂದ್ರೆ
ಕಾರ್ಲ್ ಮಾರ್ಕ್ಸ್
ಶಿವರಾಮ ಕಾರಂತ
ಶ್ರೀ ಪು. ತಿ. ನರಸಿಂಹಾಚಾರ್ಯರು
ಟಿ. ಎಸ್. ಈಲಿಯಟ್
ಮಾಸ್ತಿ ವೆಂಕಟೇಶ ಅಯ್ಯಂಗಾರ್
ಕಡೆಂಗೋಡ್ಲು ಶಂಕರ ಭಟ್ಟರು
ಶ್ರೀರಂಗ
ಅ. ನ. ಕೃಷ್ಣರಾಯರು
ಬದುಕುವ ದಾರಿ
ಶ್ರೀ ಕೃಷ್ಣ ದೌತ್ಯ
ಶ್ರೀ ಪುರಂದರ ದಾಸರು
ಸೇಡಿಯಾಪು ಕೃಷ್ಣ ಭಟ್ಟರು
ಮುದ್ದಣ
ಗೋವಿಂದ ಪೈ ಕಾವ್ಯಗಳು
ವಿ. ಸೀ.
ಹುರುಳಿ ಭೀಮರಾಯರು
ಪಂಜೆ ಮಂಗೇಶರಾವ್

ಅಚ್ಚಿನಲ್ಲಿ:

ಉಗ್ರಾಣ ಮಂಗೇಶರಾಯರು
ಕನ್ನಡ ಕಟ್ಟಿದವರು
ಮುಳಿಯ ತಿಮ್ಮಪ್ಪಯ್ಯ
ಎಸ್. ವೆಂಕಟರಾಜ
ಕೈಯಾರ ಕಿಞ್ಞಣ್ಣ ರೈ

ಶ್ರೀ ಗಣೇಶ್ ಪ್ರಿಂಟರ್ಸ್ ಅಳಕೆ, ಮಂಗಳೂರು-3.